Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

**( EXTRAORDINARY )**
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | |
|---|---|---|
| सं. १ नई दिल्ली, सोमवार, जून ८, २०२० | ज्येष्ठ २६, १९४२ (शका) | खंड ५० |
| No. 1 New Delhi, Monday, June 8, 2020 | Jyeshta 26, 1942 (Saka) | Vol. 50 |
| ನಂ. ೧ ನವ ದೆಹಲಿ, ಸೋಮವಾರ, ಜೂನ್ ೮, ೨೦೨೦ | ಜ್ಯೇಷ್ಠ ೨೬, ೧೯೪೨ (ಶಕ) | ಸಂಪುಟ ೫೦ |

**Ministry of Law and Justice**
Legislative Department
New Delhi, 08th June, 2020

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**ವಿಧಾಯೀ ಇಲಾಖೆ**
**ನವದೆಹಲಿ, 08ನೇ ಜೂನ್ 2020**

The Translation in Kannada of the following Acts, namely:- (1) The Official Trustees Act, 1913 (2 of 1913) (2) The Factories Act, 1948 (63 of 1948) (3) The Chit Funds Act, 1982 ( 40 of 1982) (4) The Sexual Harassment of Women at Work Place (Prevention, Prohibition and Redressal) Act, 2013 (14 of 2013) (5) The National Food Security Act, 2013 (20 of 2013) - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ಅಧಿಕೃತ ನ್ಯಾಸಧಾರಿಗಳ ಅಧಿನಿಯಮ, 1913 (1913ರ 2) (2) ಕಾರ್ಖಾನೆಗಳ ಅಧಿನಿಯಮ, 1948 (1948ರ 63) (3) ಚಿಟ್ ಫಂಡ್‌ಗಳ ಅಧಿನಿಯಮ, 1982 (1982ರ 40) (4) ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ಪ್ರತಿಬಂಧ, ನಿವಾರಣೆ ಮತ್ತು ಪರಿಹಾರ) ಅಧಿನಿಯಮ, 2013 (2013ರ 14) (5) ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013 (2013ರ 20)- ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ಪ್ರತಿಬಂಧ, ನಿವಾರಣೆ ಮತ್ತು ಪರಿಹಾರ) ಅಧಿನಿಯಮ, 2013

[2013ರ ಅಧಿನಿಯಮ ಸಂಖ್ಯೆ 14]

[22ನೇ ಏಪ್ರಿಲ್, 2013]

ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ರಕ್ಷಣೆ ಒದಗಿಸುವುದಕ್ಕೆ ಮತ್ತು ಲೈಂಗಿಕ ಕಿರುಕುಳವನ್ನು ತಡೆಯುವುದಕ್ಕೆ ಮತ್ತು ಲೈಂಗಿಕ ಕಿರುಕುಳದ ದೂರುಗಳನ್ನು ಬಗೆಹರಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಲೈಂಗಿಕ ಕಿರುಕುಳ ಆಗುವುದರ ಪರಿಣಾಮವಾಗಿ ಭಾರತ ಸಂವಿಧಾನದ 14ನೇ ಮತ್ತು 15ನೇ ಅನುಚ್ಛೇದಗಳ ಮೇರೆಗೆ ಮಹಿಳೆಗೆ ಇರುವ ಸಮಾನತೆಯ ಮೂಲಭೂತ ಹಕ್ಕಿನ ಮತ್ತು ಸಂವಿಧಾನದ 21ನೇ ಅನುಚ್ಛೇದದ ಮೇರೆಗೆ ಮಹಿಳೆಯ ಜೀವ ಸಂರಕ್ಷಣೆ ಹಕ್ಕಿನ ಮತ್ತು ಮಹಿಳೆಯು ಗೌರವಯುತವಾಗಿ ಬದುಕುವ ಹಕ್ಕಿನ ಮತ್ತು ಲೈಂಗಿಕ ಕಿರುಕುಳ ಇಲ್ಲದಂಥ ಸುರಕ್ಷಿತ ಪರಿಸರದ ಹಕ್ಕು ಸೇರಿದಂತೆ ಯಾವುದೇ ವೃತ್ತಿಯನ್ನು ಮಾಡಲು ಅಥವಾ ಯಾವುದೇ ಕಸುಬನ್ನು, ವ್ಯಾಪಾರವನ್ನು ಅಥವಾ ವ್ಯವಹಾರವನ್ನು ನಡೆಸಲು ಇರುವ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುವುದರಿಂದ;

ಲೈಂಗಿಕ ಕಿರುಕುಳ ಆಗದಂತೆ ರಕ್ಷಣೆ ನೀಡಿಕೆ ಮತ್ತು ಗೌರವಯುತವಾಗಿ ಕೆಲಸ ಮಾಡುವ ಹಕ್ಕನ್ನು, ಮಹಿಳೆಯರ ಬಗ್ಗೆ ಮಾಡುವ ಎಲ್ಲ ರೀತಿಯ ತಾರತಮ್ಯ ನಿವಾರಣೆ ಕುರಿತ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಮಾನವ ಹಕ್ಕುಗಳೆಂದು ಸಾರ್ವತ್ರಿಕವಾಗಿ ಮಾನ್ಯ ಮಾಡಿರುವುದರಿಂದ ಮತ್ತು ಅಂತಹ ಸಮಾವೇಶದಲ್ಲಿ ಮತ್ತು ಆ ಒಡಂಬಡಿಕೆಯ ಲಿಖಿತಗಳಲ್ಲಿ ಆ ಬಗ್ಗೆ ಆದಂಥ ಒಡಂಬಡಿಕೆಗೆ ಭಾರತ ಸರ್ಕಾರವು 1993ರ ಜೂನ್ 25ರಂದು ಸಹಿ ಮಾಡಿರುವುದರಿಂದ;

ಮತ್ತು ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ರಕ್ಷಣೆ ಒದಗಿಸುವುದಕ್ಕೆ ಸಂಬಂಧಿಸಿದಂತೆ ಆದ ಸದರಿ ಒಡಂಬಡಿಕೆಯನ್ನು ಕಾರ್ಯರೂಪಕ್ಕೆ ತರಲು ಉಪಬಂಧಗಳನ್ನು ಕಲ್ಪಿಸುವುದು ವಿಹಿತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ನಾಲ್ಕನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಿದೆ.

## ಅಧ್ಯಾಯ I
## ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ಪ್ರತಿಬಂಧ, ನಿವಾರಣೆ ಮತ್ತು ಪರಿಹಾರ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ* ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,–

(ಎ) **"ನೊಂದ ಮಹಿಳೆ"** ಎಂದರೆ–

(i) ಕೆಲಸದ ಸ್ಥಳವಾಗಿದ್ದರೆ, ಅಲ್ಲಿ ನಿಯೋಜಿತಳಾಗಿರಲಿ ಅಥವಾ ಇಲ್ಲದಿರಲಿ ಕಿರುಕುಳದಾರನಿಂದ ಲೈಂಗಿಕ ಕಿರುಕುಳದ ಯಾವುದೇ ಕೃತ್ಯಕ್ಕೆ ಒಳಗಾಗಿದ್ದೇನೆಂದು ಆರೋಪ ಮಾಡುವ ಯಾವುದೇ ವಯಸ್ಸಿನ ಮಹಿಳೆ;

(ii) ವಾಸದ ಸ್ಥಳವಾಗಿದ್ದರೆ ಅಥವಾ ಮನೆಯಾಗಿದ್ದರೆ ಅಂತಹ ವಾಸದ ಸ್ಥಳದಲ್ಲಿ ಅಥವಾ ಅಂಥ ಮನೆಯಲ್ಲಿ ನಿಯೋಜಿತಳಾಗಿರುವ ಯಾವುದೇ ವಯಸ್ಸಿನ ಮಹಿಳೆ;

(ಬಿ) **"ಸಮುಚಿತ ಸರ್ಕಾರ"** ಎಂದರೆ–

(i) ಯಾವ ಕೆಲಸದ ಸ್ಥಳವನ್ನು,–

(ಎ) ಕೇಂದ್ರ ಸರ್ಕಾರವು ಅಥವಾ ಕೇಂದ್ರಾಡಳಿತ ಪ್ರದೇಶದ ಆಡಳಿತವು, ಸ್ಥಾಪಿಸಿದ್ದರೆ, ಅದರ ಒಡೆತನದಲ್ಲಿದ್ದರೆ, ನಿಯಂತ್ರಣದಲ್ಲಿದ್ದರೆ ಅಥವಾ ಆ ಸ್ಥಳವು ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಗಳಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸನ್ನು ಪಡೆದಿದ್ದರೆ, ಅಂಥ ಕೆಲಸದ ಸ್ಥಳಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ;

(ಬಿ) ರಾಜ್ಯ ಸರ್ಕಾರವು ಸ್ಥಾಪಿಸಿದ್ದರೆ, ಅದರ ಒಡೆತನದಲ್ಲಿದ್ದರೆ, ನಿಯಂತ್ರಣದಲ್ಲಿದ್ದರೆ ಅಥವಾ ಆ ಸ್ಥಳವು ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಗಳಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸನ್ನು ಪಡೆದಿದ್ದರೆ, ಅಂಥ ಕೆಲಸದ ಸ್ಥಳಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರ;

---

* ದಿನಾಂಕ: 9 ಡಿಸೆಂಬರ್ 2013 ರಂದು ಜಾರಿಗೆ ಬಂದಿದೆ. ನೋಡಿ: ಅಧಿಸೂಚನೆ ಸಂಖ್ಯೆ. ಎಸ್.ಒ. 3606 (ಇ) ದಿನಾಂಕ: 9 ಡಿಸೆಂಬರ್ 2013, ನೋಡಿ. ಭಾರತ ಗೆಜೆಟ್, ಅಸಾಧಾರಣ ಭಾಗ II ವಿಭಾಗ 3(ii).

(ii) ಉಪಖಂಡ (i)ರ ವ್ಯಾಪ್ತಿಗೊಳಪಡದ ಮತ್ತು ತನ್ನ ರಾಜ್ಯಕ್ಷೇತ್ರದ ಒಳಗಿರುವ ಯಾವುದೇ ಕೆಲಸದ ಸ್ಥಳಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರ;

(ಸಿ) **"ಅಧ್ಯಕ್ಷ"** ಎಂದರೆ 7ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸ್ಥಳೀಯ ದೂರುಗಳ ಸಮಿತಿಗೆ ನಾಮನಿರ್ದೇಶನಗೊಂಡ ಅಧ್ಯಕ್ಷ;

(ಡಿ) **"ಜಿಲ್ಲೆ ಅಧಿಕಾರಿ"** ಎಂದರೆ 5ನೇ ಪ್ರಕರಣದ ಮೇರೆಗೆ ಅಧಿಸೂಚಿಸಿರುವ ಅಧಿಕಾರಿ;

(ಇ) **"ಮನೆಕೆಲಸಗಾರ್ತಿ"** ಎಂದರೆ ಯಾವುದೇ ಕುಟುಂಬದಲ್ಲಿ ಆ ಕುಟುಂಬದ ಮನೆಕೆಲಸಕ್ಕೆ ನೇರವಾಗಿ ಅಥವಾ ಯಾವುದೇ ಏಜೆನ್ಸಿಯ ಮೂಲಕ ತಾತ್ಕಾಲಿಕವಾಗಿ, ಖಾಯಂ ಆಗಿ, ಅರೆಕಾಲಿಕವಾಗಿ ಅಥವಾ ಪೂರ್ಣಕಾಲಿಕವಾಗಿ ಹಣದ ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಸಂಬಳದ ಮೇಲೆ ನಿಯೋಜನೆಗೊಂಡಿರುವ ಮಹಿಳೆ; ಆದರೆ ಈ ಪದದಲ್ಲಿ ನಿಯೋಜಕನ ಕುಟುಂಬದ ಯಾರೇ ಸದಸ್ಯನು ಒಳಗೊಳ್ಳುವುದಿಲ್ಲ;

(ಎಫ್) **"ನೌಕರ"** ಎಂದರೆ ಯಾವುದೇ ಕೆಲಸಕ್ಕಾಗಿ ಕೆಲಸದ ಸ್ಥಳದಲ್ಲಿ ನಿಯತವಾಗಿ, ತಾತ್ಕಾಲಿಕವಾಗಿ, ಹಂಗಾಮಿಯಾಗಿ ಅಥವಾ ದಿನಗೂಲಿ ಆಧಾರದ ಮೇಲೆ, ಪ್ರಧಾನ ನಿಯೋಜಕನ ಗಮನಕ್ಕೆ ತಂದು ಅಥವಾ ಗಮನಕ್ಕೆ ತಾರದೆಯೇ ಗುತ್ತಿಗೆದಾರನೂ ಸೇರಿದಂತೆ ಏಜೆಂಟ್‌ನಿಂದ ನೇರವಾಗಿ ಅಥವಾ ಅವನ ಮೂಲಕ ಸಂಬಳದ ಮೇಲೆ ಅಥವಾ ಸಂಬಳ ಇಲ್ಲದೆಯೇ ಅಥವಾ ಸ್ವಯಂ ಇಚ್ಛೆ ಆಧಾರದ ಮೇಲೆ ಅಥವಾ ಬೇರೆ ರೀತಿಯಲ್ಲಿ ನೌಕರಿಯ ನಿಬಂಧನೆಗಳು ವ್ಯಕ್ತವಾಗಿರಲಿ ಅಥವಾ ಇಂಗಿತದಲ್ಲಿರಲಿ ಕೆಲಸ ನಿರ್ವಹಿಸಲು ನಿಯೋಜಿತನಾಗಿರುವ ವ್ಯಕ್ತಿ ಮತ್ತು ಈ ಪದದಲ್ಲಿ ಸಹ-ಕೆಲಸಗಾರ, ಗುತ್ತಿಗೆ ಕೆಲಸಗಾರ, ಕೆಲಸ ಕಲಿಯುತ್ತಿರುವವನು, ತರಬೇತಿ ಪಡೆಯುತ್ತಿರುವವನು, (ಅಪ್ರೆಂಟಿಸ್) ನಿರ್ದಿಷ್ಟ ಅವಧಿಯವರೆಗೆ ಕೆಲಸ ಮಾಡುವವನು ಅಥವಾ ಅಂಥ ಯಾವುದೇ ಇತರೆ ಹೆಸರಿನಿಂದ ಕರೆಯಲ್ಪಡುವವರು;

(ಜಿ) **"ನಿಯೋಜಕ"** ಎಂದರೆ-

(i) ಯಾವುದೇ ಇಲಾಖೆಯಾಗಿದ್ದರೆ, ಸಂಘಸಂಸ್ಥೆಯಾಗಿದ್ದರೆ, ಉದ್ಯಮವಾಗಿದ್ದರೆ, ಕಾರ್ಯಸಂಸ್ಥೆಯಾಗಿದ್ದರೆ, ವ್ಯವಹಾರ ನಿರ್ವಹಣೆ ಸಂಸ್ಥೆಯಾಗಿದ್ದರೆ, ಸಂಸ್ಥೆಯಾಗಿದ್ದರೆ, ಸಮುಚಿತ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಕಚೇರಿಯಾಗಿದ್ದರೆ, ಶಾಖೆಯಾಗಿದ್ದರೆ ಅಥವಾ ಘಟಕವಾಗಿದ್ದರೆ, ಆ ಇಲಾಖೆಯ, ಆ ಸಂಘಸಂಸ್ಥೆಯ, ಆ ಉದ್ಯಮದ, ಆ ಕಾರ್ಯಸಂಸ್ಥೆಯ, ಆ ವ್ಯವಹಾರ ನಿರ್ವಹಣೆ ಸಂಸ್ಥೆಯ, ಆ ಸಂಸ್ಥೆಯ ಮುಖ್ಯಸ್ಥ, ಸಮುಚಿತ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಕಚೇರಿಯ, ಶಾಖೆಯ, ಘಟಕದ ಮುಖ್ಯಸ್ಥ ಅಥವಾ ಸಮುಚಿತ ಸರ್ಕಾರವು ಅಥವಾ ಸಂದರ್ಭಾನುಸಾರ ಸ್ಥಳೀಯ ಪ್ರಾಧಿಕಾರವು ಆದೇಶದ ಮೂಲಕ ಆ ಸಂಬಂಧವಾಗಿ ನಿರ್ದಿಷ್ಟಪಡಿಸಬಹುದಾದಂಥ ಇತರೆ ಅಧಿಕಾರಿ;

(ii) ಉಪ ಖಂಡ (i)ರ ವ್ಯಾಪ್ತಿಗೆ ಒಳಪಡದ ಯಾವುದೇ ಕೆಲಸದ ಸ್ಥಳ ಆಗಿದ್ದರೆ, ಆ ಕೆಲಸದ ಸ್ಥಳದ ವ್ಯವಸ್ಥಾಪನೆಗೆ, ಮೇಲ್ವಿಚಾರಣೆಗೆ ಮತ್ತು ನಿಯಂತ್ರಣಕ್ಕೆ ಜವಾಬ್ದಾರನಾಗಿರುವ ಯಾರೇ ವ್ಯಕ್ತಿ.

**ವಿವರಣೆ.-** ಈ ಉಪ-ಖಂಡದ ಉದ್ದೇಶಗಳಿಗಾಗಿ "ವ್ಯವಸ್ಥಾಪನೆ" ಎಂಬುದು ಅಂಥ ಸಂಘಸಂಸ್ಥೆಯ ನೀತಿಗಳನ್ನು ರೂಪಿಸಲು ಹಾಗೂ ಅವುಗಳನ್ನು ಕಾರ್ಯರೂಪಕ್ಕೆ ತರಲು ಜವಾಬ್ದಾರಿಯುಳ್ಳ ವ್ಯಕ್ತಿಯನ್ನು ಅಥವಾ ಮಂಡಳಿಯನ್ನು ಅಥವಾ ಸಮಿತಿಯನ್ನು ಒಳಗೊಳ್ಳುತ್ತದೆ;

(iii) ಉಪಖಂಡ (i)ರ ಮತ್ತು (ii)ರ ವ್ಯಾಪ್ತಿಯಲ್ಲಿ ಬರುವ ಕೆಲಸದ ಸ್ಥಳವಾಗಿದ್ದರೆ, ಆತನ ಅಥವಾ ಆಕೆಯ ನೌಕರರ ಸಂಬಂಧದಲ್ಲಿ ಗುತ್ತಿಗೆ ಜನ್ಯ ಬಾಧ್ಯತೆಗಳನ್ನು ನಿರ್ವಹಿಸುವ ವ್ಯಕ್ತಿ;

(iv) ವಾಸದ ಸ್ಥಳವಾಗಿದ್ದರೆ ಅಥವಾ ಮನೆಯಾಗಿದ್ದರೆ, ಮನೆಕೆಲಸಕ್ಕಾಗಿ ನಿಯೋಜಿಸಿಕೊಂಡ ಅಂಥ ಕೆಲಸಗಾರ್ತಿಯ ಸಂಖ್ಯೆ ಎಷ್ಟೇ ಇರಲಿ, ಕಾಲಾವಧಿ ಎಷ್ಟೇ ಇರಲಿ ಅಥವಾ ಅಂಥ ಕೆಲಸಗಾರ್ತಿಯ ವರ್ಗ ಯಾವುದೇ ಇರಲಿ, ಮನೆ ಕೆಲಸಗಾರ್ತಿಯು ಯಾವುದೇ ಬಗೆಯ ಕೆಲಸಗಳನ್ನು ಮಾಡುತ್ತಿರಲಿ ಅಥವಾ ಆಕೆ ಏನೇ ಕೆಲಸಕಾರ್ಯಗಳನ್ನು ನಿರ್ವಹಿಸಿರಲಿ, ಆಕೆಯನ್ನು ನಿಯೋಜಿಸಿಕೊಂಡಿರುವ ಅಥವಾ ಆಕೆಯ ನಿಯೋಜನೆಯಿಂದ ಪ್ರಯೋಜನಗಳನ್ನು ಪಡೆದುಕೊಳ್ಳುವ ವ್ಯಕ್ತಿ ಅಥವಾ ಕುಟುಂಬ;

(ಹೆಚ್) **"ಆಂತರಿಕ ಸಮಿತಿ"** ಎಂದರೆ 4ನೇ ಪ್ರಕರಣದ ಮೇರೆಗೆ ರಚಿಸಿದ ಆಂತರಿಕ ದೂರುಗಳ ಸಮಿತಿ;

(ಐ) **"ಸ್ಥಳೀಯ ಸಮಿತಿ"** ಎಂದರೆ 6ನೇ ಪ್ರಕರಣದ ಮೇರೆಗೆ ರಚಿಸಿದ ಸ್ಥಳೀಯ ದೂರುಗಳ ಸಮಿತಿ;

(ಜೆ) **"ಸದಸ್ಯ"** ಎಂದರೆ ಆಂತರಿಕ ಸಮಿತಿಯ ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯ ಸದಸ್ಯ;

(ಕೆ) **"ನಿಯಮಿಸಿದ"** ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಲ್) **"ಪೀಠಾಸೀನ ಅಧಿಕಾರಿ"** ಎಂದರೆ 4ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ನಾಮನಿರ್ದೇಶಿತನಾದ ಆಂತರಿಕ ದೂರುಗಳ ಸಮಿತಿಯ ಪೀಠಾಸೀನ ಅಧಿಕಾರಿ;

(ಎಂ) **"ಕಿರುಕುಳದಾರ"** ಎಂದರೆ ನೊಂದ ಮಹಿಳೆಯು 9ನೇ ಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ವಿರುದ್ಧ ದೂರನ್ನು ಸಲ್ಲಿಸಿರುವಳೋ ಆ ವ್ಯಕ್ತಿ;

(ಎನ್) **"ಲೈಂಗಿಕ ಕಿರುಕುಳ"** ಎಂಬುದು ಈ ಕೆಳಕಂಡ (ನೇರವಾದ ಅಥವಾ ಇಂಗಿತ) ಅಸಹ್ಯ ಕೃತ್ಯಗಳಲ್ಲಿ ಅಥವಾ ನಡವಳಿಕೆಯಲ್ಲಿ ಯಾವುದಾದರೂ ಒಂದನ್ನು ಅಥವಾ ಅದಕ್ಕಿಂತ ಹೆಚ್ಚಿನವುಗಳನ್ನು ಒಳಗೊಳ್ಳುತ್ತದೆ, ಎಂದರೆ:-

(i) ಮೈಯನ್ನು ಮುಟ್ಟುವುದು ಮತ್ತು ಒಲಿಸಿಕೊಳ್ಳಲು ಪ್ರಯತ್ನ ಮಾಡುವುದು; ಅಥವಾ

(ii) ಲೈಂಗಿಕ ಕಾಮನೆಗೆ ಒತ್ತಾಯ ಮಾಡುವುದು ಅಥವಾ ಲೈಂಗಿಕ ಕಾಮನೆಗಾಗಿ ಕೇಳುವುದು; ಅಥವಾ

(iii) ಲೈಂಗಿಕ ಹಾವಭಾವ ಎಂದರೆ ಕೈಸನ್ನೆ ಕಣ್ಸನ್ನೆ ಮಾಡುವುದು; ಅಥವಾ

(iv) ಅಶ್ಲೀಲ ಚಿತ್ರಣಗಳನ್ನು ತೋರಿಸುವುದು; ಅಥವಾ

(v) ಲೈಂಗಿಕ ಸ್ವರೂಪದ ಇತರ ಯಾವುದೇ ಅಸಹ್ಯಕರ ದೈಹಿಕ ವರ್ತನೆ, ಮೌಖಿಕ ವರ್ತನೆ ಅಥವಾ ಹಾವಭಾವದ ವರ್ತನೆ;

(ಒ) **"ಕೆಲಸದ ಸ್ಥಳ"** ಎಂಬುದು –

(i) ಯಾವುದೇ ಇಲಾಖೆಯನ್ನು, ಸಂಘಸಂಸ್ಥೆಯನ್ನು, ಉದ್ಯಮವನ್ನು, ಕಾರ್ಯಸಂಸ್ಥೆಯನ್ನು, ವ್ಯವಹಾರ ನಿರ್ವಹಣಾ ಸಂಸ್ಥೆಯನ್ನು, ಸಂಸ್ಥೆಯನ್ನು, ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿರುವ, ಅದರ ಒಡೆತನದಲ್ಲಿರುವ, ಅದರ ನಿಯಂತ್ರಣದಲ್ಲಿರುವ, ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಗಳಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸಿನ ನೆರವನ್ನು ಪಡೆದುಕೊಂಡಿರುವ ಕಚೇರಿಯನ್ನು, ಶಾಖೆಯನ್ನು ಅಥವಾ ಘಟಕವನ್ನು ಅಥವಾ ಸರ್ಕಾರಿ ಕಂಪನಿಯನ್ನು ಅಥವಾ ನಿಗಮವನ್ನು ಅಥವಾ ಸಹಕಾರ ಸಂಘವನ್ನು;

(ii) ಯಾವುದೇ ಖಾಸಗಿ ವಲಯದ ಸಂಘಸಂಸ್ಥೆಯನ್ನು ಅಥವಾ ಖಾಸಗಿ ಸಾಹಸೋದ್ಯಮವನ್ನು, ಉದ್ಯಮವನ್ನು, ವ್ಯವಹಾರ ಉದ್ಯಮವನ್ನು, ಸಂಸ್ಥೆಯನ್ನು, ಕಾರ್ಯಸಂಸ್ಥೆಯನ್ನು, ಸೊಸೈಟಿಯನ್ನು, ಟ್ರಸ್ಟನ್ನು, ಸರ್ಕಾರೇತರ ಸಂಘಸಂಸ್ಥೆಗಳನ್ನು, ಉತ್ಪಾದನೆ, ಸರಬರಾಜು, ಮಾರಾಟ, ವಿತರಣೆ ಮತ್ತು ಸೇವೆಗಳೂ ಸೇರಿದಂತೆ ವಾಣಿಜ್ಯ, ವೃತ್ತೀಯ, ವೃತ್ತಿಪರ, ಶೈಕ್ಷಣಿಕ, ಮನೋರಂಜನೆ, ಕೈಗಾರಿಕಾ, ಆರೋಗ್ಯ ಸೇವೆಗಳನ್ನು ಒದಗಿಸುತ್ತಿರುವ ಅಥವಾ ಆರ್ಥಿಕ ಚಟುವಟಿಕೆಗಳನ್ನು ನಡೆಸುತ್ತಿರುವ ಘಟಕವನ್ನು ಅಥವಾ ಸೇವಾಸಂಸ್ಥೆಯನ್ನು;

(iii) ಆಸ್ಪತ್ರೆಗಳನ್ನು ಅಥವಾ ನರ್ಸಿಂಗ್ ಹೋಮ್‌ಗಳನ್ನು;

(iv) ಯಾವುದೇ ಕ್ರೀಡಾ ಸಂಸ್ಥೆಯನ್ನು, ಕ್ರೀಡಾಂಗಣವನ್ನು, ಕ್ರೀಡಾ ಸಮುಚ್ಚಯವನ್ನು ವಾಸದ ಮನೆಗಳಿರುವ ಸ್ಥಳದಲ್ಲಿ ಇರುವ ಅಥವಾ ತರಬೇತಿಗೆ ಅಥವಾ ಕ್ರೀಡೆಗಳಿಗೆ ಅಥವಾ ಅದಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳಿಗೆ ಬಳಸದ, ಸ್ಪರ್ಧಾತ್ಮಕ ಅಥವಾ ಪಂದ್ಯಗಳ ಆಟದ ಸ್ಥಳವನ್ನು;

(v) ನೌಕರಿಯಿಂದಾಗಿ ಅಥವಾ ನೌಕರಿ ಮಾಡುತ್ತಿರುವಾಗ ನೌಕರನು ಕೈಗೊಳ್ಳಬೇಕಾದಂಥ ಪ್ರಯಾಣಕ್ಕೆ, ನಿಯೋಜಕನು ಒದಗಿಸಿದ ಸಾರಿಗೆ ಸಹಿತ, ನೌಕರನು ಭೇಟಿಕೊಟ್ಟ ಯಾವುದೇ ಸ್ಥಳವನ್ನು;

(vi) ವಾಸದ ಸ್ಥಳವನ್ನು ಅಥವಾ ಮನೆಯನ್ನು

– ಒಳಗೊಳ್ಳುತ್ತದೆ.

(ಪಿ) **"ಅಸಂಘಟಿತ ವಲಯ"** ಎಂದರೆ ಕೆಲಸದ ಸ್ಥಳವಾಗಿದ್ದು ಅಲ್ಲಿ, ಸರಕುಗಳ ಉತ್ಪಾದನೆಯಲ್ಲಿ ಅಥವಾ ಮಾರಾಟದಲ್ಲಿ ಅಥವಾ ಬೇರೆ ಯಾವುದಾದರೂ ರೀತಿಯ ಸೇವೆಯನ್ನು ಒದಗಿಸುವುದರಲ್ಲಿ ತೊಡಗಿರುವ ವ್ಯಕ್ತಿಗಳ ಅಥವಾ ಸ್ವಯಂ ಉದ್ಯೋಗದ ಕೆಲಸಗಾರರ ಒಡೆತನದಲ್ಲಿರುವ ವ್ಯವಹಾರ ನಿರ್ವಹಣಾ ಸಂಸ್ಥೆ ಮತ್ತು ಯಾವ ಆ ವ್ಯವಹಾರ ನಿರ್ವಹಣಾ ಸಂಸ್ಥೆಯಲ್ಲಿ ಕೆಲಸಗಾರರ ಸಂಖ್ಯೆಯು ಹತ್ತಕ್ಕಿಂತ ಕಡಿಮೆ ಇದೆಯೋ ಅಂಥ ವ್ಯವಹಾರ ನಿರ್ವಹಣಾ ಸಂಸ್ಥೆ.

3. **ಲೈಂಗಿಕ ಕಿರುಕುಳ ಆಗುವುದನ್ನು ತಡೆಯುವುದು.**–(1) ಯಾವುದೇ ಕೆಲಸದ ಸ್ಥಳದಲ್ಲಿ ಯಾರೇ ಮಹಿಳೆಗೆ ಲೈಂಗಿಕ ಕಿರುಕುಳ ನೀಡತಕ್ಕದ್ದಲ್ಲ.

(2) ಇತರೆ ಕೃತ್ಯಗಳೇ ಅಲ್ಲದೆ, ಈ ಕೆಳಕಂಡ ವಿದ್ಯಮಾನಗಳು ಲೈಂಗಿಕ ಕಿರುಕುಳದ ಯಾವುದೇ ನಡತೆಗೆ ಅಥವಾ ನಡವಳಿಕೆ ಸಂಬಂಧಪಟ್ಟಂತೆ ಅಥವಾ ಅದಕ್ಕೆ ಸಂಬಂಧಪಟ್ಟ ಹಾಗೆ ಉಂಟಾದರೆ ಅಥವಾ ಸಂಭವಿಸಿದರೆ ಅಂಥ ವಿದ್ಯಮಾನಗಳು ಲೈಂಗಿಕ ಕಿರುಕುಳಗಳಿಗೆ ಸಮವಾದವುಗಳೆಂದಾಗುತ್ತವೆ:

(i) ಆಕೆಯ ಉದ್ಯೋಗದಲ್ಲಿ ಬೇರೆಯವರಿಗಿಂತಲೂ ಹೆಚ್ಚು ಪ್ರಾಶಸ್ತ್ಯ ಕೊಡುತ್ತೇನೆಂದು ಇಂಗಿತ ಅಥವಾ ಸ್ಪಷ್ಟ ಆಶ್ವಾಸನೆ ಕೊಡುವುದು; ಅಥವಾ

(ii) ಆಕೆಯ ಉದ್ಯೋಗದಲ್ಲಿ ತೊಂದರೆ ಕೊಡುತ್ತೇನೆಂದು ಪರೋಕ್ಷವಾಗಿ ಅಥವಾ ಸ್ಪಷ್ಟವಾಗಿ ಬೆದರಿಕೆ ಹಾಕುವುದು; ಅಥವಾ

(iii) ಆಕೆಯ ಉದ್ಯೋಗದ ಈಗಿನ ಅಥವಾ ಮುಂದಿನ ಸ್ಥಾನಮಾನ ಕುರಿತಂತೆ ಇಂಗಿತ ಮತ್ತು ಸ್ಪಷ್ಟ ಬೆದರಿಕೆ ಹಾಕುವುದು; ಅಥವಾ

(iv) ಆಕೆಯ ಕೆಲಸದಲ್ಲಿ ಹಸ್ತಕ್ಷೇಪ ಮಾಡುವುದು ಅಥವಾ ಭಯದ ಅಥವಾ ಮನನೋಯಿಸುವ ಅಥವಾ ಪ್ರತಿಕೂಲ ಪರಿಣಾಮ ಬೀರುವಂಥ ಕೆಲಸದ ವಾತಾವರಣ ಉಂಟಾಗುವಂತೆ ಮಾಡುವುದು; ಅಥವಾ

(v) ಆಕೆಯ ಆರೋಗ್ಯವನ್ನು ಹಾಳುಮಾಡುವಂಥ ಮತ್ತು ಸುರಕ್ಷತೆಗೆ ಧಕ್ಕೆ ತರುವಂಥ ರೀತಿಯ ಹೀನಾಯವರ್ತನೆ.

## ಅಧ್ಯಾಯ II
### ಆಂತರಿಕ ದೂರುಗಳ ಸಮಿತಿಯ ರಚನೆ

4. **ಆಂತರಿಕ ದೂರುಗಳ ಸಮಿತಿಯ ರಚನೆ.**– (1) ಕೆಲಸದ ಸ್ಥಳದಲ್ಲಿ, ಪ್ರತಿಯೊಬ್ಬ ನಿಯೋಜಕನು "ಆಂತರಿಕ ದೂರುಗಳ ಸಮಿತಿ" ಎಂದು ಕರೆಯಲಾಗುವ ಒಂದು ಸಮಿತಿಯನ್ನು ಲಿಖಿತ ಆದೇಶದ ಮೂಲಕ ರಚಿಸತಕ್ಕದ್ದು:

ಪರಂತು, ಕೆಲಸದ ಸ್ಥಳದ ಅಧೀನದಲ್ಲಿರುವ ಕಚೇರಿಗಳು ಅಥವಾ ಆಡಳಿತಾತ್ಮಕ ಘಟಕಗಳು ವಿವಿಧ ಸ್ಥಳಗಳಲ್ಲಿ ಅಥವಾ ವಿಭಾಗೀಯ ಅಥವಾ ಉಪವಿಭಾಗೀಯ ಮಟ್ಟದಲ್ಲಿ ಇದ್ದರೆ ಆ ಎಲ್ಲಾ ಆಡಳಿತಾತ್ಮಕ ಘಟಕಗಳಲ್ಲಿ ಅಥವಾ ಕಚೇರಿಗಳಲ್ಲಿ ಆಂತರಿಕ ಸಮಿತಿಯನ್ನು ರಚಿಸತಕ್ಕದ್ದು.

(2) ಆಂತರಿಕ ಸಮಿತಿಯು, ನಿಯೋಜಕನು ನಾಮನಿರ್ದೇಶನ ಮಾಡುವ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಪೀಠಾಸೀನ ಅಧಿಕಾರಿ, ಕೆಲಸದ ಸ್ಥಳದಲ್ಲಿರುವ ನೌಕರರ ಪೈಕಿ ಹಿರಿಯರಾಗಿರುವ ಒಬ್ಬರು ಮಹಿಳಾ ನೌಕರಳು ಪೀಠಾಸೀನ ಅಧಿಕಾರಿಯಾಗಿರತಕ್ಕದ್ದು:

ಪರಂತು, ಹಿರಿಯ ಮಹಿಳಾ ನೌಕರಳು ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ (1)ನೇ ಉಪ–ಪ್ರಕರಣದಲ್ಲಿ ಹೇಳಿರುವ ಕೆಲಸದ ಸ್ಥಳಕ್ಕೆ ಅಧೀನವಾಗಿರುವ ಇತರ ಕಚೇರಿಗಳಿಂದ ಅಥವಾ ಆಡಳಿತಾತ್ಮಕ ಘಟಕಗಳಿಂದ ಪೀಠಾಸೀನ ಅಧಿಕಾರಿಯನ್ನು ನಾಮನಿರ್ದೇಶನ ಮಾಡತಕ್ಕದ್ದು:

ಮತ್ತೂ ಪರಂತು, ಕೆಲಸದ ಸ್ಥಳಕ್ಕೆ ಅಧೀನವಾಗಿರುವ ಇತರ ಕಚೇರಿಗಳಲ್ಲೂ ಅಥವಾ ಆಡಳಿತಾತ್ಮಕ ಘಟಕಗಳಲ್ಲೂ ಹಿರಿಯ ಮಹಿಳಾ ಉದ್ಯೋಗಿಯು ಇರದಿದ್ದ ಸಂದರ್ಭದಲ್ಲಿ ಅದೇ ನಿಯೋಜಕನ ಇತರ ಯಾವುದೇ ಕೆಲಸದ ಸ್ಥಳದಿಂದ ಅಥವಾ ಇತರೆ ಇಲಾಖೆಯಿಂದ ಅಥವಾ ಸಂಘಸಂಸ್ಥೆಯಿಂದ ಪೀಠಾಸೀನ ಅಧಿಕಾರಿಯನ್ನು ನಾಮನಿರ್ದೇಶನ ಮಾಡತಕ್ಕದ್ದು;

(ಬಿ) ನೌಕರರ ಪೈಕಿ ಇಬ್ಬರಿಗಿಂತ ಕಡಿಮೆಯಿರದ ಸದಸ್ಯರು, ಮುಖ್ಯವಾಗಿ ಮಹಿಳೆಯರ ಸಮಸ್ಯೆಗಳ ಬಗ್ಗೆ ಅರಿವುಳ್ಳವರು ಅಥವಾ ಸಮಾಜ ಕಾರ್ಯದಲ್ಲಿ ಅನುಭವವುಳ್ಳವರು ಅಥವಾ ಕಾನೂನು ಜ್ಞಾನ ಉಳ್ಳವರು;

(ಸಿ) ಒಬ್ಬರು ಸದಸ್ಯರು ಎಂದರೆ, ಸರ್ಕಾರೇತರ ಸಂಘಸಂಸ್ಥೆಗಳ ಅಥವಾ ಸಂಘಗಳ ಪೈಕಿಯಿಂದ ಮಹಿಳೆಯರ ಸಮಸ್ಯೆಗಳ ಬಗ್ಗೆ ಅರಿವುಳ್ಳ ಅಥವಾ ಲೈಂಗಿಕ ಕಿರುಕುಳ ವಿಷಯಕ್ಕೆ ಸಂಬಂಧಿಸಿದಂತೆ ವಿಷಯಗಳ ನಿರ್ವಹಣೆಯಲ್ಲಿ ಪರಿಜ್ಞಾನವುಳ್ಳ ವ್ಯಕ್ತಿ:

ಪರಂತು, ಹಾಗೆ ನಾಮನಿರ್ದೇಶನಗೊಂಡಿರುವ ಒಟ್ಟು ಸದಸ್ಯರಲ್ಲಿ ಕಡೇ ಪಕ್ಷ ಅರ್ಧದಷ್ಟು ಮಹಿಳೆಯರೇ ಇರತಕ್ಕದ್ದು.

(3) ಆಂತರಿಕ ಸಮಿತಿಯ ಪೀಠಾಸೀನ ಅಧಿಕಾರಿಯು ಮತ್ತು ಪ್ರತಿಯೊಬ್ಬ ಸದಸ್ಯನು, ಅವರು ನಾಮನಿರ್ದೇಶನಗೊಂಡ ದಿನಾಂಕದಿಂದ ಮೂರು ವರ್ಷಗಳಿಗೆ ಮೀರದಂತೆ ನಿಯೋಜಕನು ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಆ ಸ್ಥಾನದಲ್ಲಿ ಇರತಕ್ಕದ್ದು.

(4) ಸರ್ಕಾರೇತರ ಸಂಘಸಂಸ್ಥೆಗಳಿಂದ ಅಥವಾ ಸಂಘಗಳಿಂದ ನೇಮಕಗೊಂಡ ಸದಸ್ಯರಿಗೆ ಆಂತರಿಕ ಸಮಿತಿಯ ವ್ಯವಹರಣೆಗಳನ್ನು ನಡೆಸಿದ್ದಕ್ಕಾಗಿ ನಿಯೋಜಕನು ನಿಯಮಿಸಬಹುದಾದಂಥ ಫೀಜುಗಳನ್ನು ಅಥವಾ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

(5) ಆಂತರಿಕ ಸಮಿತಿಯ ಪೀಠಾಸೀನ ಅಧಿಕಾರಿಯು ಮತ್ತು ಯಾರೇ ಸದಸ್ಯನು,–

(ಎ) 16ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ; ಅಥವಾ

(ಬಿ) ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗಿನ ಅಪರಾಧದ ಬಗ್ಗೆ ಆತನ ವಿರುದ್ಧ ನಡೆಯುತ್ತಿರುವ ವಿಚಾರಣೆಯು ಬಾಕಿಯಿದ್ದರೆ; ಅಥವಾ

(ಸಿ) ಯಾವುದೇ ಶಿಸ್ತು ಕ್ರಮದ ವ್ಯವಹರಣೆಗಳಲ್ಲಿ ಆತನು ತಪ್ಪಿತಸ್ಥನೆಂದು ರುಜುವಾತಾಗಿದ್ದರೆ ಅಥವಾ ಆತನ ವಿರುದ್ಧದ ಶಿಸ್ತುಕ್ರಮದ ವ್ಯವಹರಣೆಯು ಬಾಕಿಯಿದ್ದರೆ; ಅಥವಾ

(ಡಿ) ಆತನು ತನ್ನ ಸ್ಥಾನವನ್ನು ಎಷ್ಟರಮಟ್ಟಿಗೆ ದುರುಪಯೋಗಪಡಿಸಿಕೊಂಡಿದ್ದಾನೆಂದರೆ, ಆತನು ಆ ಸ್ಥಾನದಲ್ಲಿ ಮುಂದುವರೆದಿದ್ದರೆ ಸಾರ್ವಜನಿಕ ಹಿತದೃಷ್ಟಿಗೆ ಪ್ರತಿಕೂಲವಾಗುವಷ್ಟು ದುರುಪಯೋಗಪಡಿಸಿಕೊಳ್ಳುತ್ತಾನೆಂಬುದು ಕಂಡುಬಂದರೆ

– ಅಂಥ ಪೀಠಾಸೀನ ಅಧಿಕಾರಿಯನ್ನು ಅಥವಾ ಸಂದರ್ಭಾನುಸಾರ ಸದಸ್ಯನನ್ನು ಸಮಿತಿಯಿಂದ ತೆಗೆದುಹಾಕತಕ್ಕದ್ದು ಮತ್ತು ಹಾಗೆ ಉಂಟಾದ ಖಾಲಿ ಸ್ಥಾನವನ್ನು ಅಥವಾ ಆಕಸ್ಮಿಕವಾಗಿ ಉಂಟಾದ ಯಾವುದೇ ಖಾಲಿಸ್ಥಾನವನ್ನು ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಹೊಸದಾಗಿ ನಾಮನಿರ್ದೇಶನ ಮಾಡುವ ಮೂಲಕ ಭರ್ತಿಮಾಡತಕ್ಕದ್ದು.

## ಅಧ್ಯಾಯ III
## ಸ್ಥಳೀಯ ದೂರುಗಳ ಸಮಿತಿ ರಚನೆ

**5. ಜಿಲ್ಲೆ ಅಧಿಕಾರಿಯನ್ನು ಅಧಿಸೂಚಿಸುವುದು.**– ಸಮುಚಿತ ಸರ್ಕಾರವು, ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಅಥವಾ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಅಥವಾ ಕಲೆಕ್ಟರನ್ನು ಅಥವಾ ಡೆಪ್ಯೂಟಿ–ಕಲೆಕ್ಟರನ್ನು ಪ್ರತಿಯೊಂದು ಜಿಲ್ಲೆಗೆ ಈ ಅಧಿನಿಯಮದ ಮೇರೆಗಿನ ಅಧಿಕಾರಗಳನ್ನು ಚಲಾಯಿಸಲು ಅಥವಾ ಪ್ರಕಾರ್ಯಗಳನ್ನು ನಿರ್ವಹಿಸಲು ಜಿಲ್ಲೆ ಅಧಿಕಾರಿಯನ್ನಾಗಿ ಅಧಿಸೂಚಿಸಬಹುದು.

**6. ಸ್ಥಳೀಯ ದೂರುಗಳ ಸಮಿತಿಯ ರಚನೆ ಮತ್ತು ಅದರ ಅಧಿಕಾರವ್ಯಾಪ್ತಿ.**–(1) ಪ್ರತಿಯೊಬ್ಬ ಜಿಲ್ಲೆ ಅಧಿಕಾರಿಯು, ಯಾವ ಕಾರ್ಯಸಂಸ್ಥೆಯಲ್ಲಿ ಹತ್ತಕ್ಕಿಂತ ಕಡಿಮೆ ಕೆಲಸಗಾರರು ಇರುವ ಕಾರಣದಿಂದ ಆಂತರಿಕ ದೂರುಗಳ ಸಮಿತಿಯನ್ನು ರಚಿಸಿರದಿದ್ದರೆ ಅಥವಾ ನಿಯೋಜಕನ ವಿರುದ್ಧವೇ ದೂರು ಬಂದಿದ್ದರೆ ಅಂಥ ಕಾರ್ಯಸಂಸ್ಥೆಗಳಿಂದ ಲೈಂಗಿಕ ಕಿರುಕುಳದ ದೂರುಗಳನ್ನು ಸ್ವೀಕರಿಸಲು "ಸ್ಥಳೀಯ ದೂರುಗಳ ಸಮಿತಿ" ಎಂದು ಕರೆಯಲಾಗುವ ಒಂದು ಸಮಿತಿಯನ್ನು ತನ್ನ ಜಿಲ್ಲೆಯಲ್ಲಿ ಸ್ಥಾಪಿಸತಕ್ಕದ್ದು.

(2) ಜಿಲ್ಲೆ ಅಧಿಕಾರಿಯು, ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಲು ಹಾಗೂ ಆ ದೂರುಗಳನ್ನು ಏಳು ದಿನಗಳ ಕಾಲಾವಧಿಯೊಳಗೆ ಸಂಬಂಧಿಸಿದ ಸ್ಥಳೀಯ ದೂರುಗಳ ಸಮಿತಿಗೆ ಕಳುಹಿಸಲು ಪ್ರತಿಯೊಂದು ಬ್ಲಾಕ್‌ನಲ್ಲಿ, ತಾಲ್ಲೂಕಿನಲ್ಲಿ, ಗ್ರಾಮೀಣ ಪ್ರದೇಶದಲ್ಲಿರುವ ಅಥವಾ ಬುಡಕಟ್ಟು ಪ್ರದೇಶದಲ್ಲಿರುವ ತಹಸೀಲ್‌ನಲ್ಲಿ ಮತ್ತು ನಗರ ಪ್ರದೇಶದಲ್ಲಿರುವ ವಾರ್ಡ್‌ನಲ್ಲಿ, ಪುರಸಭಾ ವ್ಯಾಪ್ತಿಯಲ್ಲಿ ನೋಡಲ್ ಅಧಿಕಾರಿಯನ್ನು ಗೊತ್ತುಪಡಿಸತಕ್ಕದ್ದು.

(3) ಸ್ಥಳೀಯ ದೂರುಗಳ ಸಮಿತಿಯ ಅಧಿಕಾರವ್ಯಾಪ್ತಿಯು ಅದನ್ನು ಯಾವ ಜಿಲ್ಲೆಯಲ್ಲಿ ರಚಿಸಲಾಗಿದೆಯೋ ಆ ಜಿಲ್ಲೆಯ ಪ್ರದೇಶಗಳಿಗೂ ವ್ಯಾಪ್ತವಾಗತಕ್ಕದ್ದು.

7. **ಸ್ಥಳೀಯ ದೂರುಗಳ ಸಮಿತಿಯ ಸಂರಚನೆ, ಅಧಿಕಾರಾವಧಿ ಮತ್ತು ಇತರ ನಿಬಂಧನೆಗಳು ಮತ್ತು ಷರತ್ತುಗಳು.–** (1) ಸ್ಥಳೀಯ ದೂರುಗಳ ಸಮಿತಿಯು ಜಿಲ್ಲೆ ಅಧಿಕಾರಿಯಿಂದ ನಾಮನಿರ್ದೇಶನಗೊಂಡ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಒಬ್ಬರು ಅಧ್ಯಕ್ಷರು ಎಂದರೆ, ಸಮಾಜ ಕಾರ್ಯಕ್ಷೇತ್ರದಲ್ಲಿ ಹಾಗೂ ಮಹಿಳೆಯರ ಸಮಸ್ಯೆಗಳ ಬಗ್ಗೆ ಅರಿವುಳ್ಳ ಮಹಿಳೆಯರ ಪೈಕಿಯಿಂದ ಒಬ್ಬರನ್ನು ನಾಮನಿರ್ದೇಶನ ಮಾಡತಕ್ಕದ್ದು;

(ಬಿ) ಒಬ್ಬರು ಸದಸ್ಯರು, ಜಿಲ್ಲೆಯಲ್ಲಿರುವ ಬ್ಲಾಕ್‌ನಲ್ಲಿ, ತಾಲ್ಲೂಕಿನಲ್ಲಿ, ತಹಸೀಲ್‌ನಲ್ಲಿ ವಾರ್ಡ್‌ನಲ್ಲಿ ಅಥವಾ ಪುರಸಭಾ ವ್ಯಾಪ್ತಿಯಲ್ಲಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಮಹಿಳೆಯರ ಪೈಕಿಯಿಂದ ಒಬ್ಬರನ್ನು ನಾಮನಿರ್ದೇಶನ ಮಾಡತಕ್ಕದ್ದು;

(ಸಿ) ಇಬ್ಬರು ಸದಸ್ಯರು ಎಂದರೆ, ಈ ಇಬ್ಬರಲ್ಲಿ ಒಬ್ಬರು ಮಹಿಳೆ ಸದಸ್ಯೆ ಇರತಕ್ಕದ್ದು, ಎಂದರೆ, ಸರ್ಕಾರೇತರ ಸಂಘಸಂಸ್ಥೆಗಳ ಅಥವಾ ಸಂಘಗಳ ಪೈಕಿಯಿಂದ ಮಹಿಳೆಯರ ಸಮಸ್ಯೆಗಳ ಬಗ್ಗೆ ಅರಿವುಳ್ಳ ಅಥವಾ ಲೈಂಗಿಕ ಕಿರುಕುಳ ವಿಷಯಕ್ಕೆ ಸಂಬಂಧಿಸಿದ ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿರುವ ಇಬ್ಬರನ್ನು ನಿಯಮಿಸಬಹುದಾದಂತೆ ನಾಮನಿರ್ದೇಶನ ಮಾಡತಕ್ಕದ್ದು:

ಪರಂತು, ನಾಮನಿರ್ದೇಶಿತರಲ್ಲಿ ಕನಿಷ್ಠ ಪಕ್ಷ ಒಬ್ಬರಿಗಾದರೂ ಕಾನೂನು ಅಥವಾ ನ್ಯಾಯಿಕ ವಿಷಯದ ಪರಿಜ್ಞಾನದ ಹಿನ್ನೆಲೆ ಇರತಕ್ಕದ್ದು:

ಮತ್ತೂ ಪರಂತು, ನಾಮನಿರ್ದೇಶಿತರಲ್ಲಿ ಕನಿಷ್ಠ ಪಕ್ಷ ಒಬ್ಬರು, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದ ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟುಗಳ ಇತರ ಹಿಂದುಳಿದ ವರ್ಗಗಳ ಅಥವಾ ಅಲ್ಪಸಂಖ್ಯಾತರ ಸಮುದಾಯದ ಮಹಿಳೆ ಇರತಕ್ಕದ್ದು;

(ಡಿ) ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವ್ಯವಹಾರಗಳನ್ನು ನಿರ್ವಹಿಸುತ್ತಿರುವ ಸಂಬಂಧಪಟ್ಟ ಅಧಿಕಾರಿಯು ಪದನಿಮಿತ್ತ ಸದಸ್ಯನಾಗಿರತಕ್ಕದ್ದು.

(2) ಸ್ಥಳೀಯ ಸಮಿತಿಯ ಅಧ್ಯಕ್ಷರು ಹಾಗೂ ಪ್ರತಿಯೊಬ್ಬ ಸದಸ್ಯನು ಅವರು ನೇಮಕಗೊಂಡ ದಿನಾಂಕದಿಂದ ಮೂರು ವರ್ಷಗಳಿಗೆ ಮೀರದಂತೆ ಜಿಲ್ಲೆ ಅಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಆ ಸ್ಥಾನದಲ್ಲಿ ಇರತಕ್ಕದ್ದು.

(3) ಸ್ಥಳೀಯ ದೂರುಗಳ ಸಮಿತಿಯ ಅಧ್ಯಕ್ಷರು ಅಥವಾ ಯಾರೇ ಸದಸ್ಯನು,–

(ಎ) 16ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ; ಅಥವಾ

(ಬಿ) ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಅಥವಾ ತತ್‌ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗಿನ ಅಪರಾಧದ ಬಗ್ಗೆ ಆತನ ವಿರುದ್ಧ ನಡೆಯುತ್ತಿರುವ ವಿಚಾರಣೆಯು ಬಾಕಿಯಿದ್ದರೆ; ಅಥವಾ

(ಸಿ) ಯಾವುದೇ ಶಿಸ್ತು ಕ್ರಮದ ವ್ಯವಹರಣೆಗಳಲ್ಲಿ ಆತನು ತಪ್ಪಿತಸ್ಥನೆಂದು ರುಜುವಾತು ಆಗಿದ್ದರೆ ಅಥವಾ ಆತನ ವಿರುದ್ಧದ ಶಿಸ್ತು ಕ್ರಮದ ವ್ಯವಹರಣೆಯು ಬಾಕಿಯಿದ್ದರೆ; ಅಥವಾ

(ಡಿ) ಆತನು ತನ್ನ ಸ್ಥಾನವನ್ನು ಎಷ್ಟರಮಟ್ಟಿಗೆ ದುರುಪಯೋಗ ಪಡಿಸಿಕೊಂಡಿದ್ದಾನೆಂದರೆ ಆತನು ಆ ಸ್ಥಾನದಲ್ಲಿ ಮುಂದುವರಿದಿದ್ದರೆ ಸಾರ್ವಜನಿಕ ಹಿತದೃಷ್ಟಿಗೆ ಪ್ರತಿಕೂಲವಾಗುವಷ್ಟು ದುರುಪಯೋಗ ಪಡಿಸಿಕೊಳ್ಳುತ್ತಾನೆಂಬುದು ಕಂಡು ಬಂದರೆ;

ಅಂಥ ಅಧ್ಯಕ್ಷರನ್ನು ಅಥವಾ ಆತನನ್ನು ಆ ಪದದಲ್ಲಿ ಮುಂದುವರಿಸುವುದು ಬಾಧಕವೆಂದು ಕಂಡುಬಂದರೆ ಅಂಥ ಅಧ್ಯಕ್ಷನನ್ನು ಅಥವಾ ಸಂದರ್ಭಾನುಸಾರ ಸದಸ್ಯನನ್ನು ಸಮಿತಿಯಿಂದ ತೆಗೆದು ಹಾಕತಕ್ಕದ್ದು ಮತ್ತು ಹಾಗೆ ಉಂಟಾದ ಖಾಲಿಸ್ಥಾನವನ್ನು ಅಥವಾ ಆಕಸ್ಮಿಕವಾಗಿ ಉಂಟಾದ ಖಾಲಿಸ್ಥಾನವನ್ನು ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಹೊಸದಾಗಿ ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.

(4) ಉಪ-ಪ್ರಕರಣ (1)ರ (ಬಿ) ಮತ್ತು (ಡಿ) ಖಂಡಗಳ ಮೇರೆಗೆ ನಾಮನಿರ್ದೇಶಿತರಾದ ಸದಸ್ಯರನ್ನು ಹೊರತುಪಡಿಸಿ ಸ್ಥಳೀಯ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಸ್ಥಳೀಯ ಸಮಿತಿಯ ವ್ಯವಹರಣೆಗಳನ್ನು ನಡೆಸಿದ್ದಕ್ಕಾಗಿ ನಿಯಮಿಸಬಹುದಾದಂಥ ಫೀಜುಗಳನ್ನು ಅಥವಾ ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

**8. ಅನುದಾನಗಳು ಮತ್ತು ಲೆಕ್ಕ ಪರಿಶೋಧನೆ.–** (1) ಕೇಂದ್ರ ಸರ್ಕಾರವು, ಈ ಸಂಬಂಧವಾಗಿ ಸಂಸತ್ತು ಕಾನೂನಿನ ಮೂಲಕ ಸೂಕ್ತವಾಗಿ ಹಣ ಹಂಚಿಕೆ ಮಾಡಿದ ಯುಕ್ತ ಧನ ವಿನಿಯೋಗದ ತರುವಾಯ 7ನೇ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿ ಹೇಳಿರುವ ಶುಲ್ಕಗಳನ್ನು ಅಥವಾ ಭತ್ಯೆಗಳನ್ನು ಸಂದಾಯ ಮಾಡಲು ರಾಜ್ಯ ಸರ್ಕಾರವು ಬಳಸಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರವು ಸೂಕ್ತವೆಂದು ತಾನು ಭಾವಿಸಬಹುದಾದಷ್ಟು ಹಣದ ಮೊತ್ತವನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಬಹುದು.

(2) ರಾಜ್ಯ ಸರ್ಕಾರವು ಇದಕ್ಕಾಗಿ ಏಜೆನ್ಸಿಯೊಂದನ್ನು ಸ್ಥಾಪಿಸಬಹುದು ಮತ್ತು (1)ನೇ ಉಪ-ಪ್ರಕರಣದ ಮೇರೆಗೆ ಬಿಡುಗಡೆ ಮಾಡಿದ ಅನುದಾನಗಳನ್ನು ಆ ಏಜೆನ್ಸಿಗೆ ವರ್ಗಾವಣೆ ಮಾಡಬಹುದು.

(3) 7ನೇ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿ ಹೇಳಿದ ಶುಲ್ಕಗಳನ್ನು ಅಥವಾ ಭತ್ಯೆಗಳನ್ನು ಸಂದಾಯ ಮಾಡಲು ಬೇಕಾಗಬಹುದಾದಂಥ ಹಣವನ್ನು ಆ ಏಜೆನ್ಸಿಯು ಜಿಲ್ಲೆ ಅಧಿಕಾರಿಗೆ ಪಾವತಿ ಮಾಡತಕ್ಕದ್ದು.

(4)ಉಪ-ಪ್ರಕರಣ (2)ರಲ್ಲಿ ಹೇಳಿರುವ ಏಜೆನ್ಸಿಯ ಲೆಕ್ಕಪತ್ರಗಳನ್ನು ಇಡತಕ್ಕದ್ದು ಮತ್ತು ರಾಜ್ಯದ ಮಹಾಲೇಖಪಾಲರೊಂದಿಗೆ ಸಮಾಲೋಚಿಸಿ ಅವರು ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಪರಿಶೋಧನೆಯನ್ನು ಮಾಡಿಸತಕ್ಕದ್ದು ಮತ್ತು ಏಜೆನ್ಸಿಯ ಲೆಕ್ಕಪತ್ರಗಳನ್ನು ಸುಪರ್ದಿನಲ್ಲಿಟ್ಟುಕೊಂಡಿರುವ ವ್ಯಕ್ತಿಯು ಲೆಕ್ಕ ಪರಿಶೋಧಕರ ವರದಿಯ ಸಹಿತ ಏಜೆನ್ಸಿಯ ಲೆಕ್ಕಪತ್ರಗಳ ಪರಿಶೋಧಿತ ಪ್ರತಿಯನ್ನು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ದಿನಾಂಕಕ್ಕೂ ಮುಂಚೆ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

## ಅಧ್ಯಾಯ IV
## ದೂರು

**9. ಲೈಂಗಿಕ ಕಿರುಕುಳ ಆಗಿರುವುದರ ಬಗ್ಗೆ ದೂರು.**–(1) ಯಾರೇ ನೊಂದ ಮಹಿಳೆಯು, ಕೆಲಸದ ಸ್ಥಳದಲ್ಲಿ ತನಗೆ ಆಗಿರುವ ಲೈಂಗಿಕ ಕಿರುಕುಳದ ಬಗ್ಗೆ ದೂರನ್ನು, ಆಂತರಿಕ ಸಮಿತಿ ರಚನೆಯಾಗಿದ್ದರೆ ಆ ಸಮಿತಿಗೆ ಅಥವಾ ಅಂಥ ಸಮಿತಿಯು ರಚನೆ ಆಗಿರದಿದ್ದರೆ ಸ್ಥಳೀಯ ಸಮಿತಿಗೆ, ಆ ಕೃತ್ಯ ನಡೆದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗಾಗಿ ಮತ್ತು ಅವು ಸರಣಿ ಕೃತ್ಯಗಳಾಗಿದ್ದರೆ, ಅವುಗಳ ಪೈಕಿ ಕೊನೆಯ ಕೃತ್ಯ ನಡೆದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಲಿಖಿತದಲ್ಲಿ ಸಲ್ಲಿಸಬಹುದು:

ಪರಂತು, ಅಂಥ ದೂರನ್ನು ಲಿಖಿತದಲ್ಲಿ ಸಲ್ಲಿಸಲು ಸಾಧ್ಯವಾಗದಿದ್ದರೆ ಆಂತರಿಕ ಸಮಿತಿಯ ಪೀಠಾಸೀನ ಅಧಿಕಾರಿಯು ಅಥವಾ ಯಾರೇ ಸದಸ್ಯನು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯ ಅಧ್ಯಕ್ಷರು ಅಥವಾ ಯಾರೇ ಸದಸ್ಯನು ಆ ನೊಂದ ಮಹಿಳೆಗೆ ಲಿಖಿತದಲ್ಲಿ ದೂರನ್ನು ಸಲ್ಲಿಸುವುದಕ್ಕಾಗಿ ಎಲ್ಲ ಸೂಕ್ತ ನೆರವನ್ನು ನೀಡತಕ್ಕದ್ದು:

ಮತ್ತೂ ಪರಂತು, ಅಂಥ ಲೈಂಗಿಕ ಕಿರುಕುಳ ಆಗಿರುವ ಬಗ್ಗೆ ಸದರಿ ಅವಧಿಯೊಳಗಾಗಿ ದೂರನ್ನು ಸಲ್ಲಿಸುವುದಕ್ಕೆ ಆ ಮಹಿಳೆಗೆ ಸಾಧ್ಯವಾಗದಂಥ ಸಂದರ್ಭ ಸನ್ನಿವೇಶಗಳು ಇದ್ದವೆಂಬುದು ಆಂತರಿಕ ಸಮಿತಿಗೆ ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಗೆ ಮನವರಿಕೆಯಾದರೆ, ಲಿಖಿತದಲ್ಲಿ ದೂರನ್ನು ಸಲ್ಲಿಸಲು ಮೂರು ತಿಂಗಳುಗಳ ಅವಧಿ ಮೀರದಂತೆ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಕಾಲವನ್ನು ವಿಸ್ತರಿಸಬಹುದು.

(2) ನೊಂದ ಮಹಿಳೆಯು ತನ್ನ ದೈಹಿಕ ಅಸಮರ್ಥತೆಯಿಂದಾಗಿ ಅಥವಾ ಮಾನಸಿಕ ಅಸಮರ್ಥತೆಯಿಂದಾಗಿ ಅಥವಾ ಆಕೆಯ ಮರಣದಿಂದಾಗಿ ಅಥವಾ ಅನ್ಯಥಾ ದೂರನ್ನು ಸಲ್ಲಿಸಲು ಆಗಿರದಿದ್ದರೆ, ಈ ಪ್ರಕರಣದ ಮೇರೆಗೆ ದೂರನ್ನು ಆಕೆಯ ಕಾನೂನುಬದ್ಧ ವಾರಸುದಾರನು ಅಥವಾ ನಿಯಮಿಸಬಹುದಾದಂಥ ಇತರ ವ್ಯಕ್ತಿಯು ಸಲ್ಲಿಸಬಹುದು.

**10. ರಾಜಿ ಸಂಧಾನ.**– (1) 11ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ಪ್ರಾರಂಭಿಸುವುದಕ್ಕೂ ಮುಂಚೆ ಮತ್ತು ನೊಂದ ಮಹಿಳೆಯು ತನ್ನ ಮತ್ತು ಕಿರುಕುಳದಾರನ ನಡುವೆ ರಾಜಿಗೆ ಕೋರಿಕೊಂಡರೆ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು ಆಕೆಯ ಮತ್ತು ಕಿರುಕುಳದಾರನ ನಡುವೆ ರಾಜಿಗೆ ಸಂಧಾನ ಮಾಡಿ ವಿಷಯಗಳನ್ನು ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಬಹುದು:

ಪರಂತು, ರಾಜಿ ಸಂಧಾನಕ್ಕೋಸ್ಕರವೇ ಯಾವುದೇ ಹಣಕಾಸಿನ ಇತ್ಯರ್ಥ ಮಾಡಿಕೊಳ್ಳತಕ್ಕದ್ದಲ್ಲ.

(2) ಉಪ–ಪ್ರಕರಣ (1)ರ ಮೇರೆಗೆ ಇತ್ಯರ್ಥಕ್ಕೆ ಬಂದಿದ್ದರೆ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು ಹಾಗೆ ಇತ್ಯರ್ಥಕ್ಕೆ ಬಂದಿರುವುದನ್ನು ದಾಖಲು ಮಾಡಿಕೊಳ್ಳತಕ್ಕದ್ದು ಮತ್ತು ತನ್ನ ಶಿಫಾರಸ್ಸಿನಲ್ಲಿ ನಿರ್ದಿಷ್ಟಪಡಿಸಿದಂತೆ ಕ್ರಮಗಳನ್ನು ತೆಗೆದುಕೊಳ್ಳಲು ಅದನ್ನು ನಿಯೋಜಕನಿಗೆ ಅಥವಾ ಜಿಲ್ಲೆ ಅಧಿಕಾರಿಗೆ ಕಳುಹಿಸತಕ್ಕದ್ದು.

(3) ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು (2)ನೇ ಉಪ–ಪ್ರಕರಣದ ಮೇರೆಗೆ ದಾಖಲಿಸಿಕೊಂಡಿರುವ ಇತ್ಯರ್ಥದ ಪ್ರತಿಗಳನ್ನು ನೊಂದ ಮಹಿಳೆಗೆ ಮತ್ತು ಕಿರುಕುಳದಾರನಿಗೆ ಒದಗಿಸತಕ್ಕದ್ದು.

(4) ಉಪ–ಪ್ರಕರಣ (1)ರ ಮೇರೆಗೆ ಇತ್ಯರ್ಥಕ್ಕೆ ಬಂದಿದ್ದರೆ ಸ್ಥಳೀಯ ಸಮಿತಿಯು ಅಥವಾ ಸಂದರ್ಭಾನುಸಾರ ಆಂತರಿಕ ಸಮಿತಿಯು ಮತ್ತೆ ಯಾವುದೇ ವಿಚಾರಣೆಯನ್ನೂ ನಡೆಸತಕ್ಕದ್ದಲ್ಲ.

**11. ದೂರಿನ ಬಗ್ಗೆ ವಿಚಾರಣೆ.**– (1) 10ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು, ಕಿರುಕುಳದಾರನು ನೌಕರನಾಗಿದ್ದರೆ, ಆ ಕಿರುಕುಳದಾರನಿಗೆ ಅನ್ವಯವಾಗಬಹುದಾದ ಸೇವಾ ನಿಯಮಗಳ ಉಪಬಂಧಗಳಿಗನುಸಾರವಾಗಿ ಮತ್ತು ಅಂತಹ ನಿಯಮಗಳು ಇರದೇ ಇದ್ದರೆ ನಿಯಮಿಸಬಹುದಾದಂಥ ರೀತಿಯಲ್ಲಿ ದೂರುಗಳ ಬಗ್ಗೆ ವಿಚಾರಣೆ ಮಾಡಲು ಮುಂದುವರಿಯತಕ್ಕದ್ದು ಅಥವಾ ಮನೆಕೆಲಸಗಾರ್ತಿಯಾಗಿದ್ದರೆ ಸ್ಥಳೀಯ ಸಮಿತಿಯು, ಘಟನೆ ನಡೆದಿರುವುದು ಮೇಲ್ನೋಟಕ್ಕೆ ಕಂಡುಬರುವಂತಿದ್ದರೆ ಭಾರತ ದಂಡ ಸಂಹಿತೆಯ 509ನೇ (1860ರ 45) ಪ್ರಕರಣದ ಮೇರೆಗೆ ಹಾಗೂ ಸದರಿ ಸಂಹಿತೆಯ ಇತರೆ ಯಾವುದೇ ಸುಸಂಗತ ಉಪಬಂಧಗಳು ಪ್ರಕರಣಕ್ಕೆ ಅನ್ವಯವಾಗುವಂತಿದ್ದರೆ ಅವುಗಳ ಮೇರೆಗೆ ಆ ಪ್ರಕರಣವನ್ನು ದಾಖಲು ಮಾಡಿಕೊಳ್ಳುವುದಕ್ಕಾಗಿ ಪೊಲೀಸರಿಗೆ ಏಳು ದಿನಗಳ ಒಳಗಾಗಿ ದೂರನ್ನು ರವಾನಿಸತಕ್ಕದ್ದು:

ಪರಂತು, 10ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಇತ್ಯರ್ಥಕ್ಕೆ ಬಂದಿರುವುದರಲ್ಲಿ ಒಳಗೊಂಡಿರುವ ಯಾವುದೇ ನಿಬಂಧನೆಯನ್ನು ಅಥವಾ ಷರತ್ತನ್ನು ಕಿರುಕುಳದಾರನು ಪಾಲಿಸಿಲ್ಲ ಎಂದು ಅಥವಾ ಈಡೇರಿಸಿಲ್ಲ ಎಂದು ನೊಂದ ಮಹಿಳೆಯು ಆಂತರಿಕ ಸಮಿತಿಗೆ ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಗೆ ತಿಳಿಸಿದರೆ ಆಂತರಿಕ ಸಮಿತಿಯು ಅಥವಾ ಸ್ಥಳೀಯ ಸಮಿತಿಯು ದೂರುಗಳ ಬಗ್ಗೆ ವಿಚಾರಣೆ ಮಾಡಲು ಮುಂದುವರಿಯತಕ್ಕದ್ದು ಅಥವಾ ದೂರನ್ನು ಪೊಲೀಸರಿಗೆ ರವಾನಿಸತಕ್ಕದ್ದು:

ಮತ್ತೂ ಪರಂತು, ಕಿರುಕುಳದಾರ ಮತ್ತು ನೊಂದ ಮಹಿಳೆ ಇಬ್ಬರೂ ನೌಕರರಾಗಿದ್ದರೆ, ವಿಚಾರಣೆ ಆಗುತ್ತಿರುವಾಗ ಅವರವರ ಅಹವಾಲನ್ನು ಹೇಳಿಕೊಳ್ಳಲು ಅವರಿಗೆ ಅವಕಾಶ ಕೊಡತಕ್ಕದ್ದು ಮತ್ತು ನಿರ್ಣಯಗಳ ವಿರುದ್ಧ ಅವರು ಸಮಿತಿಗೆ ಮನವಿ ಸಲ್ಲಿಸಲು ಅನುಕೂಲವಾಗುವಂತೆ ಅವುಗಳ ಪ್ರತಿಯನ್ನು ಇಬ್ಬರಿಗೂ ದೊರಕಿಸಿಕೊಡತಕ್ಕದ್ದು.

(2) ಭಾರತ ದಂಡ ಸಂಹಿತೆಯ (1860ರ 45) 509ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕಿರುಕುಳದಾರನು ಅಪರಾಧಿ ಎಂದು ನಿರ್ಣಿತನಾದರೆ ನ್ಯಾಯಾಲಯವು 15ನೇ ಪ್ರಕರಣದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತವೆಂದು ತಾನು ಪರಿಗಣಿಸಬಹುದಾದಂಥ ಮೊತ್ತದಷ್ಟು ಹಣವನ್ನು ಕಿರುಕುಳದಾರನು ನೊಂದ ಮಹಿಳೆಗೆ ಸಂದಾಯ ಮಾಡತಕ್ಕದ್ದೆಂದು ಆದೇಶ ಮಾಡಬಹುದು.

(3) ಉಪ–ಪ್ರಕರಣ (1)ರ ಮೇರೆಗೆ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು, ದಾವೆಯ ಅಧಿವಿಚಾರಣೆ ಮಾಡುವಾಗ ಈ ಕೆಳಕಂಡ ವಿಷಯಗಳ ಬಗ್ಗೆ ಎಂದರೆ:–

ಸಿವಿಲ್ ನ್ಯಾಯಾಲಯವು,

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದಕ್ಕೆ ಮತ್ತು ಅವನು ಹಾಜರಾಗುವಂತೆ ಒತ್ತಾಯ ಮಾಡುವುದಕ್ಕೆ ಹಾಗೂ ಪ್ರಮಾಣ ಮಾಡಿಸಿ ಅವನನ್ನು ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಪತ್ತೆ ಮಾಡುವಂತೆ ಹಾಗೂ ಅವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವುದು; ಮತ್ತು

(ಸಿ) ನಿಯಮಿಸಬಹುದಾದ ಯಾವುದೇ ಇತರ ವಿಷಯಕ್ಕೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂತಹವೇ ಅಧಿಕಾರಗಳನ್ನು ಹೊಂದಿರತಕ್ಕದ್ದು;

(4) ಉಪ-ಪ್ರಕರಣ (1)ರ ಮೇರೆಗೆ ವಿಚಾರಣೆಯನ್ನು ತೊಂಬತ್ತು ದಿನಗಳ ಅವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು.

## ಅಧ್ಯಾಯ V
## ದೂರಿನ ಬಗ್ಗೆ ವಿಚಾರಣೆ

**12. ವಿಚಾರಣೆಯು ಬಾಕಿ ಇರುವಾಗಿನ ಕ್ರಮ.**–(1) ವಿಚಾರಣೆಯು ಬಾಕಿ ಇರುವ ಅವಧಿಯಲ್ಲಿ ನೊಂದ ಮಹಿಳೆಯು ಲಿಖಿತ ಕೋರಿಕೆ ಮಾಡಿಕೊಂಡರೆ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು,–

(ಎ) ನೊಂದ ಮಹಿಳೆಯನ್ನು ಅಥವಾ ಕಿರುಕುಳದಾರನನ್ನು ಯಾವುದೇ ಇತರ ಕೆಲಸದ ಸ್ಥಳಕ್ಕೆ ವರ್ಗಾವಣೆ ಮಾಡಲು; ಅಥವಾ

(ಬಿ) ನೊಂದ ಮಹಿಳೆಗೆ ಮೂರು ತಿಂಗಳ ಅವಧಿಯವರೆಗೆ ರಜೆಯನ್ನು ಮಂಜೂರು ಮಾಡಲು; ಅಥವಾ

(ಸಿ) ನೊಂದ ಮಹಿಳೆಗೆ ನಿಯಮಿಸಬಹುದಾದಂಥ ಇತರ ಪರಿಹಾರವನ್ನು ನೀಡಲು, –

ನಿಯೋಜಕನಿಗೆ ಶಿಫಾರಸು ಮಾಡಬಹುದು.

(2) ಈ ಪ್ರಕರಣದ ಮೇರೆಗೆ ನೊಂದ ಮಹಿಳೆಗೆ ಮಂಜೂರು ಮಾಡಿದ ರಜೆಯು ಆಕೆಗೆ ಅನ್ಯಥಾ ಹಕ್ಕಿದ್ದ ರಜೆಯ ಜೊತೆಗೆ ಹೆಚ್ಚುವರಿಯಾಗಿರತಕ್ಕದ್ದು.

(3) ಉಪ-ಪ್ರಕರಣ (1)ರ ಮೇರೆಗೆ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು ಶಿಫಾರಸು ಮಾಡಿದಾಗ ನಿಯೋಜಕನು, (1)ನೇ ಉಪ-ಪ್ರಕರಣದ ಮೇರೆಗಿನ ಶಿಫಾರಸುಗಳನ್ನು ಅನುಷ್ಠಾನಗೊಳಿಸತಕ್ಕದ್ದು ಮತ್ತು ಅನುಷ್ಠಾನದ ವರದಿಯನ್ನು ಆಂತರಿಕ ಸಮಿತಿಗೆ ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಗೆ ಸಲ್ಲಿಸತಕ್ಕದ್ದು.

**13. ವಿಚಾರಣೆಯ ವರದಿ.**– (1) ಈ ಅಧಿನಿಯಮದ ಮೇರೆಗೆ ವಿಚಾರಣೆಯನ್ನು ಪೂರ್ಣಗೊಳಿಸಿದ ಮೇಲೆ ಸ್ಥಳೀಯ ಸಮಿತಿಯು ಅಥವಾ ಸಂದರ್ಭಾನುಸಾರ ಆಂತರಿಕ ಸಮಿತಿಯು ತನ್ನ ನಿರ್ಣಯದ ವರದಿಯನ್ನು ನಿಯೋಜಕನಿಗೆ ಅಥವಾ ಸಂದರ್ಭಾನುಸಾರ ಜಿಲ್ಲೆ ಅಧಿಕಾರಿಗೆ ವಿಚಾರಣೆಯನ್ನು ಪೂರ್ಣಗೊಳಿಸಿದ ದಿನಾಂಕದಿಂದ 10 ದಿನಗಳ ಅವಧಿಯೊಳಗಾಗಿ ಕಳುಹಿಸತಕ್ಕದ್ದು ಮತ್ತು ಅಂಥ ವರದಿಯು ಸಂಬಂಧಪಟ್ಟ ಪಕ್ಷಕಾರರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

(2) ಕಿರುಕುಳದಾರನ ವಿರುದ್ಧ ಮಾಡಿದ ಆಪಾದನೆಯು ರುಜುವಾತಾಗಿಲ್ಲವೆಂಬ ನಿರ್ಣಯಕ್ಕೆ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು ಬಂದಿದ್ದರೆ, ಅದು ಈ ವಿಷಯದಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳುವ ಅಗತ್ಯವಿಲ್ಲ ಎಂಬುದಾಗಿ ನಿಯೋಜಕನಿಗೆ ಮತ್ತು ಜಿಲ್ಲೆ ಅಧಿಕಾರಿಗೆ ಶಿಫಾರಸು ಮಾಡತಕ್ಕದ್ದು.

(3) ಕಿರುಕುಳದಾರನ ವಿರುದ್ಧ ಮಾಡಿದ್ದ ಆಪಾದನೆಯು ರುಜುವಾತಾಗಿದೆ ಎಂಬ ನಿರ್ಣಯಕ್ಕೆ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು ಬಂದಿದ್ದರೆ, ಅದು ನಿಯೋಜಕನಿಗೆ ಅಥವಾ ಸಂದರ್ಭಾನುಸಾರ ಜಿಲ್ಲೆ ಅಧಿಕಾರಿಗೆ,–

(i) ಕಿರುಕುಳದಾರನಿಗೆ ಅನ್ವಯವಾಗಬಹುದಾದ ಸೇವಾ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಅಥವಾ ಅಂತಹ ಸೇವಾ ನಿಯಮಗಳನ್ನು ರಚಿಸಿರದಿದ್ದರೆ ಲೈಂಗಿಕ ಕಿರುಕುಳದ ದುರ್ನಡತೆಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಲು;

(ii) ಕಿರುಕುಳದಾರನಿಗೆ ಅನ್ವಯವಾಗಬಹುದಾದ ಸೇವಾ ನಿಯಮಗಳಲ್ಲಿ ಏನೇ ಇದ್ದರೂ, ಸೂಕ್ತವೆಂದು ತಾನು ಪರಿಗಣಿಸಬಹುದಾದಂಥ ಅಥವಾ 15ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ನಿರ್ಧರಿಸಬಹುದಾದಂಥ ಮೊತ್ತವನ್ನು ನೊಂದ ಮಹಿಳೆಗೆ ಅಥವಾ ಅವಳ ಕಾನೂನುಸಮ್ಮತ ವಾರಸುದಾರರಿಗೆ ಸಂದಾಯ ಮಾಡುವುದಕ್ಕಾಗಿ ಕಿರುಕುಳದಾರನ ಸಂಬಳದಿಂದ ಅಥವಾ ಮಜೂರಿಗಳಿಂದ ಮುರಿದುಕೊಳ್ಳಲು ನಿಯೋಜಕನಿಗೆ ಮತ್ತು ಜಿಲ್ಲೆ ಅಧಿಕಾರಿಗೆ

–ಶಿಫಾರಸು ಮಾಡತಕ್ಕದ್ದು.

ಪರಂತು, ಕಿರುಕುಳದಾರನು ಕರ್ತವ್ಯಕ್ಕೆ ಗೈರುಹಾಜರಾಗಿರುವ ಅಥವಾ ಆತನ ನೌಕರಿಯು ಸಮಾಪ್ತಿಗೊಂಡ ಕಾರಣದಿಂದಾಗಿ ಅವನ ಸಂಬಳದಿಂದ ಅಂಥ ಮೊಬಲಗನ್ನು ಮುರಿದುಕೊಳ್ಳಲು ಸಾಧ್ಯವಾಗದಿದ್ದರೆ ಕಿರುಕುಳದಾರನು ನೊಂದ ಮಹಿಳೆಗೆ ಅಂಥ ಮೊಬಲಗನ್ನು ಸಂದಾಯ ಮಾಡುವಂತೆ ನಿಯೋಜಕನು ನಿರ್ದೇಶನ ನೀಡಬಹುದು:

ಮತ್ತೂ ಪರಂತು, (ii)ನೇ ಖಂಡದಲ್ಲಿ ಹೇಳಿರುವ ಮೊತ್ತವನ್ನು ಸಂದಾಯ ಮಾಡಲು ಕಿರುಕುಳದಾರನು ವಿಫಲನಾದ ಸಂದರ್ಭದಲ್ಲಿ, ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು ವಸೂಲಿಗೆ ಮಾಡಿರುವ ಆದೇಶವನ್ನು ಸಂಬಂಧಪಟ್ಟ ಜಿಲ್ಲೆ ಅಧಿಕಾರಿಗೆ ಆ ಮೊತ್ತವನ್ನು ಭೂ ಕಂದಾಯದ ಬಾಕಿ ಎಂಬಂತೆ ವಸೂಲಿ ಮಾಡಲು ರವಾನಿಸಬಹುದು.

(4) ನಿಯೋಜಕನು ಅಥವಾ ಜಿಲ್ಲೆ ಅಧಿಕಾರಿಯು ಶಿಫಾರಸನ್ನು ತಾನು ಸ್ವೀಕರಿಸಿದ ಅರವತ್ತು ದಿನಗಳ ಒಳಗಾಗಿ ಆ ಶಿಫಾರಸಿನ ಪ್ರಕಾರ ಕಾರ್ಯಪ್ರವೃತ್ತನಾಗತಕ್ಕದ್ದು.

**14. ಸುಳ್ಳು ದೂರನ್ನು ಅಥವಾ ದುರುದ್ದೇಶಪೂರ್ವಕ ದೂರನ್ನು ಸಲ್ಲಿಸಿದ್ದಕ್ಕಾಗಿ ಮತ್ತು ಸುಳ್ಳು ಸಾಕ್ಷ್ಯ ನೀಡಿದ್ದಕ್ಕಾಗಿ ದಂಡನೆ.–** (1) ಕಿರುಕುಳದಾರನ ವಿರುದ್ಧ ಮಾಡಿದ ಆಪಾದನೆಗಳು ದುರುದ್ದೇಶದವುಗಳೆಂದು ಅಥವಾ ದೂರನ್ನು ನೀಡಿದ ಮಹಿಳೆಯು ಅಥವಾ ಯಾರೇ ಇತರ ವ್ಯಕ್ತಿಯು ಆ ದೂರು ಸುಳ್ಳಿನದೆಂದು ಗೊತ್ತಿದ್ದರೂ ದೂರನ್ನು ನೀಡಿದ್ದಾಳೆಂದು ಅಥವಾ ದೂರನ್ನು ನೀಡಿದ ಈ ಮಹಿಳೆಯು ಅಥವಾ ಯಾರೇ ಇತರ ವ್ಯಕ್ತಿಯು ಯಾವುದೇ ಖೋಟಾ ದಸ್ತಾವೇಜನ್ನು ಅಥವಾ ತಪ್ಪುದಾರಿಗೆಳೆಯುವ ದಸ್ತಾವೇಜನ್ನು ಹಾಜರುಪಡಿಸಿದ್ದಾಳೆಂಬ ನಿರ್ಣಯಕ್ಕೆ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು ಬಂದರೆ, ಅದು ಸಂದರ್ಭಾನುಸಾರ 9ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಥವಾ (2)ನೇ ಉಪ–ಪ್ರಕರಣದ ಮೇರೆಗೆ ಆತನಿಗೆ ಅಥವಾ ಆಕೆಗೆ ಅನ್ವಯವಾಗಬಹುದಾದ ಸೇವಾ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಅಥವಾ ಅಂಥ ಸೇವಾ ನಿಯಮಗಳು ಇರದಿದ್ದರೆ ನಿಯಮಿಸಬಹುದಾದ ರೀತಿಯಲ್ಲಿ ಆ ಮಹಿಳೆಯ ಅಥವಾ ಆ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಲು ನಿಯೋಜಕನಿಗೆ ಅಥವಾ ಜಿಲ್ಲೆ ಅಧಿಕಾರಿಗೆ ಶಿಫಾರಸು ಮಾಡಬಹುದು:

ಪರಂತು, ದೂರಿಗೆ ಸಮರ್ಥನೆ ಒದಗಿಸುವುದಕ್ಕೆ ಅಥವಾ ಸಮರ್ಪಕ ಸಾಕ್ಷ್ಯವನ್ನು ಒದಗಿಸುವುದಕ್ಕೆ ಆಗಲಿಲ್ಲವೆಂಬ ಕಾರಣ ಮಾತ್ರದಿಂದಲೇ ಈ ಪ್ರಕರಣದ ಮೇರೆಗೆ ದೂರುದಾರಳ ವಿರುದ್ಧ ಕ್ರಮಕ್ಕೆ ಅವಕಾಶ ಇರುವುದಿಲ್ಲ:

ಮತ್ತೂ ಪರಂತು, ದೂರುದಾರಳಿಗೆ ದುರುದ್ದೇಶಪೂರ್ವಕ ಮನಸ್ಸು ಇತ್ತೆಂಬುದನ್ನು, ವಿಚಾರಣೆಯಾದ ತರುವಾಯ ಯಾವುದೇ ಕ್ರಮಕ್ಕೆ ಶಿಫಾರಸು ಮಾಡುವ ಮುಂಚೆಯೇ ನಿಯಮಿಸಿದ ಕಾರ್ಯವಿಧಾನಕ್ಕನುಸಾರವಾಗಿ ಸಾಬೀತುಪಡಿಸತಕ್ಕದ್ದು.

(2) ವಿಚಾರಣೆ ಆಗುತ್ತಿರುವಾಗ ಯಾರೇ ಸಾಕ್ಷಿದಾರನು ಸುಳ್ಳು ಸಾಕ್ಷ್ಯ ನೀಡಿದ್ದಾನೆಂಬ ಅಥವಾ ಯಾವುದೇ ಸುಳ್ಳಿನ ಅಥವಾ ತಪ್ಪು ದಾರಿಗೆಳೆಯುವ ದಸ್ತಾವೇಜುಗಳನ್ನು ಹಾಜರುಪಡಿಸಿದ್ದಾನೆಂಬ ನಿರ್ಣಯಕ್ಕೆ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು ಬಂದರೆ, ಸದರಿ ಸಾಕ್ಷಿದಾರನಿಗೆ ಅನ್ವಯವಾಗಬಹುದಾದ ಸೇವಾ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಅಥವಾ ಅಂಥ ಸೇವಾ ನಿಯಮಗಳು ಇರದಿದ್ದರೆ ನಿಯಮಿಸಬಹುದಾದಂಥ ರೀತಿಯಲ್ಲಿ ಕ್ರಮಕೈಗೊಳ್ಳಲು ಆ ಸಾಕ್ಷಿದಾರನನ್ನು ನಿಯೋಜಿಸಿಕೊಂಡಿರುವ ನಿಯೋಜಕನಿಗೆ ಅಥವಾ ಸಂದರ್ಭಾನುಸಾರ ಜಿಲ್ಲೆ ಅಧಿಕಾರಿಗೆ ಶಿಫಾರಸು ಮಾಡಬಹುದು.

**15. ಪರಿಹಾರದ ನಿರ್ಧರಣೆ.–** ನೊಂದ ಮಹಿಳೆಗೆ, 13ನೇ ಪ್ರಕರಣದ (3)ನೇ ಉಪ–ಪ್ರಕರಣದ (ii)ನೇ ಖಂಡದ ಮೇರೆಗೆ ಪಾವತಿ ಮಾಡಬೇಕಾದ ಮೊತ್ತವನ್ನು ನಿರ್ಧರಣೆ ಮಾಡುವ ಉದ್ದೇಶಕ್ಕಾಗಿ ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು,–

(ಎ) ನೊಂದ ಮಹಿಳೆಗೆ ಆಗಿರುವ ಮಾನಸಿಕ ಆಘಾತವನ್ನು, ನೋವನ್ನು, ಸಂಕಟವನ್ನು ಮತ್ತು ಮನೋವೇದನೆಯಿಂದ ತೀರಾ ಕುಗ್ಗಿಹೋಗಿರುವುದನ್ನು;

(ಬಿ) ಲೈಂಗಿಕ ಕಿರುಕುಳ ಆಗಿದ್ದರಿಂದಾಗಿ ವೃತ್ತಿಯಲ್ಲಿ ಮುಂದಿನ ಅವಕಾಶಗಳು ತಪ್ಪಿಹೋಗಿರುವುದನ್ನು;

(ಸಿ) ದೈಹಿಕ ಅಥವಾ ಮಾನಸಿಕ ಚಿಕಿತ್ಸೆಗಾಗಿ ನೊಂದ ಮಹಿಳೆಯು ಮಾಡಿರುವ ವೈದ್ಯಕೀಯ ಖರ್ಚು ವೆಚ್ಚಗಳನ್ನು;

(ಡಿ) ಕಿರುಕುಳದಾರನ ಆದಾಯವನ್ನು ಮತ್ತು ಹಣಕಾಸಿನ ಸ್ಥಿತಿಗತಿಯನ್ನು;

(ಇ) ಅಂಥ ಮೊತ್ತವನ್ನು ಒಂದೇ ಸಲ ಅಥವಾ ಕಂತುಗಳಲ್ಲಿ ಸಂದಾಯ ಮಾಡುವ ಸಾಧ್ಯತೆಯನ್ನು

– ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

**16. ದೂರಿನ ಹಾಗೂ ವಿಚಾರಣೆಯ ವ್ಯವಹರಣೆಗಳ ಒಳಾಂಶಗಳ ಪ್ರಕಟಣೆಯನ್ನು ಅಥವಾ ಅವುಗಳನ್ನು ತಿಳಿಯಪಡಿಸುವುದಕ್ಕೆ ನಿಷೇಧ.–** ಮಾಹಿತಿ ಹಕ್ಕು ಅಧಿನಿಯಮ, 2005 (2005ರ 22)ರಲ್ಲಿ ಏನೇ ಒಳಗೊಂಡಿದ್ದರೂ, 9ನೇ ಪ್ರಕರಣದ ಮೇರೆಗೆ ಸಲ್ಲಿಸಿದ ದೂರಿನಲ್ಲಿರುವ ಒಳಾಂಶಗಳನ್ನು, ನೊಂದ ಮಹಿಳೆಯ, ಕಿರುಕುಳದಾರನ ಮತ್ತು ಸಾಕ್ಷಿದಾರನ ಗುರುತನ್ನು ಮತ್ತು ವಿಳಾಸಗಳನ್ನು, ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು ಮಾಡಿದ ರಾಜಿ ಸಂಧಾನಕ್ಕೆ ಮತ್ತು ವಿಚಾರಣೆಯ ವ್ಯವಹರಣೆಗಳಿಗೆ, ಶಿಫಾರಸುಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ನಿಯೋಜಕನು ಅಥವಾ ಜಿಲ್ಲೆ ಅಧಿಕಾರಿಯು ಕೈಗೊಂಡ ಕ್ರಮವನ್ನು ಯಾವುದೇ ರೀತಿಯಲ್ಲಿ ಸಾರ್ವಜನಿಕರಿಗೆ, ಪತ್ರಿಕೆಗಳಿಗೆ ಮತ್ತು ಸಮೂಹ ಮಾಧ್ಯಮಗಳಿಗೆ ಪ್ರಕಟಿಸತಕ್ಕದ್ದಲ್ಲ, ತಿಳಿಸತಕ್ಕದ್ದಲ್ಲ ಅಥವಾ ಗೊತ್ತಾಗುವ ಹಾಗೆ ಮಾಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದಲ್ಲಿ ಹೇಳಿರುವಂಥ ಲೈಂಗಿಕ ಕಿರುಕುಳಕ್ಕೆ ಒಳಗಾದ ಯಾರೇ ಮಹಿಳೆಗೆ ನ್ಯಾಯ ದೊರೆತಿರುವುದಕ್ಕೆ ಸಂಬಂಧಿಸಿದ ಮಾಹಿತಿಯನ್ನು, ನೊಂದ ಆ ಮಹಿಳೆಯ ಮತ್ತು ಸಾಕ್ಷಿದಾರರುಗಳ ಹೆಸರನ್ನು, ವಿಳಾಸವನ್ನು, ಗುರುತನ್ನು ಅಥವಾ ಆಕೆಯನ್ನು ಅಥವಾ ಸಾಕ್ಷಿದಾರರನ್ನು ಗುರುತು ಹಿಡಿಯುವುದಕ್ಕೆ ಆಸ್ಪದ ಕೊಡುವ ಯಾವುದೇ ಇತರ ವಿವರಗಳನ್ನು ಬಹಿರಂಗಪಡಿಸದೆಯೇ ಪ್ರಸಾರ ಮಾಡಬಹುದು.

**17. ದೂರಿನ ಮತ್ತು ವಿಚಾರಣೆಯ ವ್ಯವಹರಣೆಯ ಒಳಾಂಶಗಳನ್ನು ಪ್ರಕಟಿಸಿದ್ದಕ್ಕಾಗಿ ಅಥವಾ ಅವುಗಳನ್ನು ತಿಳಿಯಪಡಿಸಿದ್ದಕ್ಕಾಗಿ ದಂಡನೆ.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ದೂರಿನ ನಿರ್ವಹಣೆ ಮಾಡುವ ಅಥವಾ ದೂರಿನ ಬಗ್ಗೆ ವ್ಯವಹರಿಸುವ, ವಿಚಾರಣೆ ಮಾಡುವ ಅಥವಾ ಯಾವುದೇ ಶಿಫಾರಸುಗಳನ್ನು ಮಾಡುವ ಅಥವಾ ಕ್ರಮ ಕೈಗೊಳ್ಳುವ ಕರ್ತವ್ಯವನ್ನು ಯಾರಿಗೆ ವಹಿಸಿಕೊಡಲಾಗಿದೆಯೋ ಆ ಯಾರೇ ವ್ಯಕ್ತಿಯು 16ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಸದರಿ ವ್ಯಕ್ತಿಗೆ ಅನ್ವಯವಾಗಬಹುದಾದ ಸೇವಾ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಅಥವಾ ಅಂಥ ಸೇವಾ ನಿಯಮಗಳು ಇರದಿದ್ದರೆ ನಿಯಮಿಸಬಹುದಾದಂಥ ರೀತಿಯಲ್ಲಿ ದಂಡನೆಗೆ ಗುರಿಯಾಗತಕ್ಕದ್ದು.

**18. ಅಪೀಲು.–** (1) ಪ್ರಕರಣ13ರ (2)ನೇ ಉಪ–ಪ್ರಕರಣದ ಮೇರೆಗೆ ಅಥವಾ 13ನೇ ಪ್ರಕರಣದ (3)ನೇ ಉಪ–ಪ್ರಕರಣದ (i)ನೇ ಖಂಡದ ಮೇರೆಗೆ ಅಥವಾ (ii)ನೇ ಖಂಡದ ಮೇರೆಗೆ ಅಥವಾ 14ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ 2ನೇ ಉಪ–ಪ್ರಕರಣದ ಮೇರೆಗೆ ಅಥವಾ 17ನೇ ಪ್ರಕರಣದ ಮೇರೆಗೆ ಮಾಡಿದ ಶಿಫಾರಸುಗಳಿಂದ ಅಥವಾ ಅಂಥ

ಶಿಫಾರಸುಗಳನ್ನು ಅನುಷ್ಠಾನಗೊಳಿಸದಿರುವುದರಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸದರಿ ವ್ಯಕ್ತಿಗೆ ಅನ್ವಯವಾಗಬಹುದಾದ ಸೇವಾ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ನ್ಯಾಯಾಲಯಕ್ಕೆ ಅಥವಾ ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು ಅಥವಾ ಅಂಥ ಸೇವಾ ನಿಯಮಗಳು ಇರದಿದ್ದರೆ ಆಗ ತತ್‌ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಬಾಧಕವಾಗದಂತೆ ನಿಯಮಿಸಬಹುದಾದಂಥ ರೀತಿಯಲ್ಲಿ ಅಪೀಲನ್ನು ಬಾಧಿತ ವ್ಯಕ್ತಿಯು ಸಲ್ಲಿಸಬಹುದು.

(2) ಉಪ-ಪ್ರಕರಣ (1)ರ ಮೇರೆಗಿನ ಅಪೀಲನ್ನು, ಶಿಫಾರಸುಗಳನ್ನು ಮಾಡಿದ ತೊಂಬತ್ತು ದಿನಗಳ ಅವಧಿಯ ಒಳಗಾಗಿ ಸಲ್ಲಿಸತಕ್ಕದ್ದು.

## ಅಧ್ಯಾಯ VI
## ನಿಯೋಜಕನ ಕರ್ತವ್ಯಗಳು

**19. ನಿಯೋಜಕನ ಕರ್ತವ್ಯಗಳು.–** ಪ್ರತಿಯೊಬ್ಬ ನಿಯೋಜಕನು,–

(ಎ) ಕೆಲಸದ ಸ್ಥಳದಲ್ಲಿ ಸುರಕ್ಷಿತ ಪರಿಸರವನ್ನು ಕಲ್ಪಿಸತಕ್ಕದ್ದು, ಅಲ್ಲಿ, ಆ ಸ್ಥಳಕ್ಕೆ ಬಂದು ಹೋಗುವ ವ್ಯಕ್ತಿಗಳಿಂದ ಸಹ ಸುರಕ್ಷತೆ ಒಳಗೊಂಡಿರತಕ್ಕದ್ದು;

(ಬಿ) ಲೈಂಗಿಕ ಕಿರುಕುಳವನ್ನು ಎಸಗಿದರೆ ಯಾವ ಯಾವ ದಂಡನೆಗಳಿಗೆ ಒಳಗಾಗಬೇಕಾಗುತ್ತೆಂಬುದನ್ನು ಮತ್ತು 4ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಆಂತರಿಕ ಸಮಿತಿಯನ್ನು ರಚಿಸಿರುವ ಆದೇಶವನ್ನು ಕೆಲಸದ ಸ್ಥಳದಲ್ಲಿ ಯಾವುದಾದರೂ ಎದ್ದು ಕಾಣುವ ಜಾಗದಲ್ಲಿ ಪ್ರದರ್ಶಿಸತಕ್ಕದ್ದು;

(ಸಿ) ನೌಕರರು ಅಧಿನಿಯಮದ ಉಪಬಂಧಗಳ ಸೂಕ್ಷ್ಮ ಪರಿಜ್ಞಾನವುಳ್ಳವರನ್ನಾಗಿ ಮಾಡುವುದಕ್ಕಾಗಿ ಅವರಿಗೆ ನಿಯತ ಅಂತರಗಳಲ್ಲಿ ಕಾರ್ಯಾಗಾರಗಳನ್ನು ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮತ್ತು ಆಂತರಿಕ ಸಮಿತಿಯ ಸದಸ್ಯರಿಗಾಗಿ ಮನನ ಕಾರ್ಯಕ್ರಮಗಳನ್ನು ನಿಯಮಿಸಬಹುದಾದ ರೀತಿಯಲ್ಲಿ ಏರ್ಪಡಿಸತಕ್ಕದ್ದು;

(ಡಿ) ದೂರನ್ನು ವ್ಯವಹರಿಸುವುದಕ್ಕಾಗಿ ಮತ್ತು ದೂರಿನ ವಿಚಾರಣೆ ನಡೆಸುವುದಕ್ಕಾಗಿ ಆಂತರಿಕ ಸಮಿತಿಗೆ ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಗೆ ಅವಶ್ಯಕ ಸೌಲಭ್ಯಗಳನ್ನು ಒದಗಿಸತಕ್ಕದ್ದು;

(ಇ) ಆಂತರಿಕ ಸಮಿತಿಯು ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯ ಮುಂದೆ ಕಿರುಕುಳದಾರನು ಮತ್ತು ಸಾಕ್ಷಿದಾರರು ಹಾಜರಾಗುವಂತೆ ಮಾಡಲು ನೆರವಾಗತಕ್ಕದ್ದು;

(ಎಫ್) 9ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಿದ ದೂರಿಗೆ ಸಂಬಂಧಿಸಿದಂತೆ ಬೇಕಾಗಬಹುದಾದಂಥ ಮಾಹಿತಿಯು ಆಂತರಿಕ ಸಮಿತಿಗೆ ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಗೆ ಲಭ್ಯವಾಗುವಂತೆ ಮಾಡತಕ್ಕದ್ದು;

(ಜಿ) ಮಹಿಳೆಯು ಅಪರಾಧಕ್ಕೆ ಸಂಬಂಧಿಸಿದಂತೆ ಭಾರತ ದಂಡ ಸಂಹಿತೆ, (1860ರ 45)ಯ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ದೂರನ್ನು ದಾಖಲಿಸಲು ಇಚ್ಛಿಸಿದರೆ ಆಕೆಗೆ ನೆರವನ್ನು ಒದಗಿಸತಕ್ಕದ್ದು;

(ಹೆಚ್) ದುಷ್ಕೃತ್ಯ ಮಾಡಿದವನ ವಿರುದ್ಧ ಅಥವಾ ದುಷ್ಕೃತ್ಯ ಮಾಡಿದವನು ನೌಕರನಲ್ಲದಿದ್ದರೆ, ಲೈಂಗಿಕ ಕಿರುಕುಳವು ಎಲ್ಲಿ ಆಗಿತ್ತೋ ಆ ಕೆಲಸದ ಸ್ಥಳದಲ್ಲಿಯೇ ಅವನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ನೊಂದ ಮಹಿಳೆಯು ಇಚ್ಛಿಸಿದರೆ ಆ ಕೆಲಸದ ಸ್ಥಳದಲ್ಲಿ ಭಾರತ ದಂಡ ಸಂಹಿತೆ (1860ರ 45)ಯ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ, ಕ್ರಮ ಜರುಗಿಸತಕ್ಕದ್ದು;

(ಐ) ಲೈಂಗಿಕ ಕಿರುಕುಳವನ್ನು ಸೇವಾ ನಿಯಮಗಳ ಮೇರೆಗೆ ದುರ್ನಡತೆಯೆಂಬುದಾಗಿ ಪರಿಗಣಿಸತಕ್ಕದ್ದು ಮತ್ತು ಅಂಥ ದುರ್ನಡತೆಗಾಗಿ ಕ್ರಮವನ್ನು ಜರುಗಿಸತಕ್ಕದ್ದು;

(ಜೆ) ಆಂತರಿಕ ಸಮಿತಿಯು ತನ್ನ ವರದಿಗಳನ್ನು ಸಕಾಲದಲ್ಲಿ ಸಲ್ಲಿಸುವುದರ ಬಗ್ಗೆ ನಿಗಾ ಇಡತಕ್ಕದ್ದು.

## ಅಧ್ಯಾಯ VII
## ಜಿಲ್ಲೆ ಅಧಿಕಾರಿಯ ಕರ್ತವ್ಯಗಳು ಮತ್ತು ಅಧಿಕಾರಗಳು

**20. ಜಿಲ್ಲೆ ಅಧಿಕಾರಿಯ ಕರ್ತವ್ಯಗಳು ಮತ್ತು ಅಧಿಕಾರಗಳು.**–ಜಿಲ್ಲೆ ಅಧಿಕಾರಿಯು,–

(ಎ) ಸ್ಥಳೀಯ ಸಮಿತಿಯು ತನ್ನ ವರದಿಗಳನ್ನು ಸಕಾಲದಲ್ಲಿ ಸಲ್ಲಿಸುವುದರ ಬಗ್ಗೆ ನಿಗಾ ಇಡತಕ್ಕದ್ದು.

(ಬಿ) ಲೈಂಗಿಕ ಕಿರುಕುಳದ ಬಗ್ಗೆ ಮತ್ತು ಮಹಿಳೆಯರ ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಕಾರ್ಯದಲ್ಲಿ ಸರ್ಕಾರೇತರ ಸಂಘಸಂಸ್ಥೆಗಳು ತೊಡಗಿಕೊಳ್ಳುವಂತೆ ಮಾಡಲು ಅವಶ್ಯಕವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ VIII
## ಸಂಕೀರ್ಣ

**21. ಸಮಿತಿಯು ವಾರ್ಷಿಕ ವರದಿಯನ್ನು ಸಲ್ಲಿಸುವುದು.**– (1) ಆಂತರಿಕ ಸಮಿತಿ ಅಥವಾ ಸಂದರ್ಭಾನುಸಾರ ಸ್ಥಳೀಯ ಸಮಿತಿಯು, ಪ್ರತಿಯೊಂದು ಕ್ಯಾಲೆಂಡರ್ ವರ್ಷದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ನಿಯೋಜಕನಿಗೆ ಮತ್ತು ಜಿಲ್ಲೆ ಅಧಿಕಾರಿಗೆ ಸಲ್ಲಿಸತಕ್ಕದ್ದು.

(2) ಜಿಲ್ಲೆ ಅಧಿಕಾರಿಯು, (1)ನೇ ಉಪ-ಪ್ರಕರಣದ ಮೇರೆಗೆ ಸ್ವೀಕರಿಸಿದ ವಾರ್ಷಿಕ ವರದಿಗಳಿಗೆ ಸಂಬಂಧಪಟ್ಟಂತೆ ಸಂಕ್ಷಿಪ್ತ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**22. ನಿಯೋಜಕನು ವಾರ್ಷಿಕ ವರದಿಯಲ್ಲಿ ಮಾಹಿತಿಯನ್ನು ಸೇರಿಸುವುದು.-** ಈ ಅಧಿನಿಯಮದ ಮೇರೆಗೆ ಯಾವುದಾದರೂ ಪ್ರಕರಣಗಳು ದಾಖಲಾಗಿದ್ದರೆ ಹಾಗೂ ಅವುಗಳನ್ನು ವಿಲೇವಾರಿ ಮಾಡಿದ್ದರೆ ಅಂಥ ಪ್ರಕರಣಗಳ ಸಂಖ್ಯೆಯನ್ನು, ಅಂಥವುಗಳು ತನ್ನ ಸಂಸ್ಥೆಯ ವಾರ್ಷಿಕ ವರದಿಯಲ್ಲಿ ನಮೂದಾಗಿದ್ದರೆ ಸಮಿತಿಯ ವರದಿಯಲ್ಲಿ ಸೇರಿಸತಕ್ಕದ್ದು ಅಥವಾ ಯಾವ ಪ್ರಕರಣಗಳ ಬಗ್ಗೆ ಅಂಥ ವರದಿಯನ್ನು ಸಿದ್ಧಪಡಿಸಬೇಕಾದ ಅಗತ್ಯ ಇಲ್ಲವೋ ಅಂಥ ಪ್ರಕರಣಗಳೇನಾದರೂ ಇದ್ದರೆ ಅವುಗಳ ಸಂಖ್ಯೆಯನ್ನು ಜಿಲ್ಲೆ ಅಧಿಕಾರಿಗೆ ತಿಳಿಸತಕ್ಕದ್ದು.

**23. ಸಮುಚಿತ ಸರ್ಕಾರವು ಅನುಷ್ಠಾನದ ಮೇಲೆ ನಿಗಾ ಇಡುವುದು ಮತ್ತು ದತ್ತಾಂಶವನ್ನು ಇಡುವುದು.-** ಸಮುಚಿತ ಸರ್ಕಾರವು, ಈ ಅಧಿನಿಯಮದ ಅನುಷ್ಠಾನದ ಮೇಲೆ ನಿಗಾ ಇಡತಕ್ಕದ್ದು ಮತ್ತು ಕೆಲಸದ ಸ್ಥಳದಲ್ಲಿ ಆಗಿರುವ ಲೈಂಗಿಕ ಕಿರುಕುಳದ ಬಗ್ಗೆ ದಾಖಲಾಗಿರುವ ಪ್ರಕರಣಗಳ ಸಂಖ್ಯೆಗೆ ಮತ್ತು ವಿಲೇವಾರಿ ಮಾಡಿದ ಎಲ್ಲ ಪ್ರಕರಣಗಳ ಸಂಖ್ಯೆಗೆ ಸಂಬಂಧಪಟ್ಟಂತೆ ದತ್ತಾಂಶವನ್ನು ಇಡತಕ್ಕದ್ದು.

**24. ಸಮುಚಿತ ಸರ್ಕಾರವು ಈ ಅಧಿನಿಯಮವನ್ನು ಸಾರ್ವಜನಿಕವಾಗಿ ಪ್ರಚಾರ ಮಾಡಲು ಕ್ರಮ ತೆಗೆದುಕೊಳ್ಳುವುದು.-** ಸಮುಚಿತ ಸರ್ಕಾರವು, ಆರ್ಥಿಕ ಮತ್ತು ಇತರ ಸಂಪನ್ಮೂಲಗಳ ಲಭ್ಯತೆಗಳಿಗೆ ಒಳಪಟ್ಟು,-

(ಎ) ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ರಕ್ಷಣೆಗೆ ಉಪಬಂಧ ಕಲ್ಪಿಸಿರುವ ಈ ಅಧಿನಿಯಮದ ಉಪಬಂಧಗಳ ಬಗ್ಗೆ ಸಾರ್ವಜನಿಕರಿಗೆ ಇರುವ ತಿಳುವಳಿಕೆಯನ್ನು ಇನ್ನಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಸುಸಂಗತವಾದ ಮಾಹಿತಿಯನ್ನು, ಶಿಕ್ಷಣವನ್ನು, ಸಂವಹನವನ್ನು ಮತ್ತು ತರಬೇತಿ ಸಾಮಗ್ರಿಗಳನ್ನು ರೂಪಿಸಬಹುದು ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು;

(ಬಿ) ಸ್ಥಳೀಯ ದೂರುಗಳ ಸಮಿತಿಯ ಸದಸ್ಯರುಗಳಿಗೆ ಮನನ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು.

**25. ಮಾಹಿತಿಯನ್ನು ಕೊಡುವಂತೆ ಕೇಳಲು ಮತ್ತು ದಾಖಲೆಗಳ ತಪಾಸಣೆ ಮಾಡಲು ಅಧಿಕಾರ.-** (1) ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಕೆಲಸದ ಸ್ಥಳದಲ್ಲಿ ಮಹಿಳಾ ನೌಕರರ ಹಿತದೃಷ್ಟಿಯಿಂದ,-

(ಎ) ಮಹಿಳೆಯರಿಗೆ ಆಗಿರುವ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ತನಗೆ ಬೇಕಾಗಬಹುದಾದಂಥ ಮಾಹಿತಿಯನ್ನು ಯಾರೇ ನಿಯೋಜಕನು ಅಥವಾ ಜಿಲ್ಲೆ ಅಧಿಕಾರಿಯು ಲಿಖಿತದಲ್ಲಿ ಒದಗಿಸುವುದು ಅವಶ್ಯಕ ಎಂದು ಸಮುಚಿತ ಸರ್ಕಾರಕ್ಕೆ ಮನವರಿಕೆಯಾದರೆ ಅಂಥ ಮಾಹಿತಿಯನ್ನು ಒದಗಿಸುವಂತೆ ಲಿಖಿತ ಆದೇಶದ ಮೂಲಕ ಅದು ನಿಯೋಜಕನನ್ನು ಅಥವಾ ಜಿಲ್ಲೆ ಅಧಿಕಾರಿಯನ್ನು ಕೇಳಬಹುದು;

(ಬಿ) ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮತ್ತು ಕೆಲಸದ ಸ್ಥಳವನ್ನು ತಪಾಸಣೆ ಮಾಡುವುದಕ್ಕೆ ಯಾರೇ ಅಧಿಕಾರಿಗೆ ಲಿಖಿತ ಆದೇಶದ ಮೂಲಕ ಅಧಿಕಾರ ಕೊಡುವುದು ಅವಶ್ಯಕವೆಂದು ಸಮುಚಿತ ಸರ್ಕಾರಕ್ಕೆ ಮನವರಿಕೆಯಾದರೆ ಅದು ಆ ಅಧಿಕಾರವನ್ನು ಅಂಥ ಅಧಿಕಾರಿಗೆ ಲಿಖಿತ ಆದೇಶದ ಮೂಲಕ ಕೊಡಬಹುದು. ಆ ಅಧಿಕಾರಿಯು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಅಂಥ ತಪಾಸಣಾ ವರದಿಯನ್ನು ಸಮುಚಿತ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ತಪಾಸಣೆ ಮಾಡುವ ಅಧಿಕಾರಿಯು ಅಂಥ ತಪಾಸಣೆಯ ವಸ್ತು ವಿಷಯಕ್ಕೆ ಸಂಬಂಧಪಡುವ, ಪ್ರತಿಯೊಬ್ಬ ನಿಯೋಜಕನ ಅಥವಾ ಜಿಲ್ಲೆ ಅಧಿಕಾರಿಯ ಸುಪರ್ದಿನಲ್ಲಿರುವ ಎಲ್ಲ ಮಾಹಿತಿಯನ್ನು, ದಾಖಲೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಒದಗಿಸುವಂತೆ ಕೇಳಿದಾಗ ಪ್ರತಿಯೊಬ್ಬ ನಿಯೋಜಕನು ಅಥವಾ ಜಿಲ್ಲೆ ಅಧಿಕಾರಿಯು ಅವುಗಳನ್ನು ತಪಾಸಣಾ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು.

**26. ಅಧಿನಿಯಮದ ಉಪಬಂಧಗಳನ್ನು ಪಾಲನೆ ಮಾಡದಿರುವುದಕ್ಕಾಗಿ ದಂಡನೆ.-** (1) ನಿಯೋಜಕನು,-

(ಎ) 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಆಂತರಿಕ ಸಮಿತಿಯನ್ನು ರಚಿಸಲು ವಿಫಲನಾದರೆ;

(ಬಿ) 13ನೇ, 14ನೇ ಮತ್ತು 22ನೇ ಪ್ರಕರಣಗಳ ಮೇರೆಗೆ ಕ್ರಮ ಕೈಗೊಳ್ಳಲು ವಿಫಲನಾದರೆ; ಮತ್ತು

(ಸಿ) ಈ ಅಧಿನಿಯಮದ ಇತರ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳನ್ನು ಉಲ್ಲಂಘಿಸಿದರೆ ಅಥವಾ ಉಲ್ಲಂಘಿಸಲು ಪ್ರಯತ್ನಿಸಿದರೆ ಅಥವಾ ಉಲ್ಲಂಘಿಸಲು ದುಷ್ಪ್ರೇರಣೆ ನೀಡಿದರೆ

- ಅವನು ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾರೇ ನಿಯೋಜಕನು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಅಪರಾಧಿಯೆಂದು ಈ ಹಿಂದೆಯೇ ನಿರ್ಣೀತನಾಗಿದ್ದರೆ, ಆ ತರುವಾಯ ಅದೇ ಅಪರಾಧವನ್ನು ಮಾಡಿದ್ದರೆ ಮತ್ತು ಅಪರಾಧಿಯೆಂದು ನಿರ್ಣೀತನಾಗಿದ್ದರೆ ಅವನು,-

(i) ಮೊದಲ ಸಲ ಅಪರಾಧ ನಿರ್ಣಯ ಆದಾಗ ಆ ಅಪರಾಧಕ್ಕೆ ಗರಿಷ್ಠ ಎಷ್ಟು ದಂಡನೆಯನ್ನು ವಿಧಿಸಬಹುದಾಗಿತ್ತೋ ಅಷ್ಟು ಗರಿಷ್ಠ ದಂಡನೆಗೆ ಒಳಪಟ್ಟು, ತರುವಾಯ ಮಾಡಿದ ಅದೇ ಅಪರಾಧಕ್ಕೆ ಎರಡು ಪಟ್ಟು ದಂಡನೆಗೆ ಗುರಿಯಾಗತಕ್ಕದ್ದು;

ಪರಂತು, ಆಪಾದಿತನನ್ನು ಯಾವ ಅಪರಾಧಕ್ಕಾಗಿ ಪ್ರಾಸಿಕ್ಯೂಟ್ ಮಾಡಲಾಗುತ್ತಿದೆಯೋ ಆ ಅಪರಾಧಕ್ಕೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಹೆಚ್ಚಿನ ಶಿಕ್ಷೆಯನ್ನು ನಿರ್ದಿಷ್ಟಪಡಿಸಿದ್ದರೆ ನ್ಯಾಯಾಲಯವು ದಂಡನೆಯನ್ನು ವಿಧಿಸುವಾಗ ಅದನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದು;

(ii) ಆತನ ವ್ಯವಹಾರವನ್ನು ಅಥವಾ ಅದಕ್ಕೆ ಸಂಬಂಧಿಸಿದ ಕೆಲಸಕಾರ್ಯಗಳನ್ನು ಮಾಡುವುದಕ್ಕಾಗಿ ನೀಡಿದ ಲೈಸೆನ್ಸ್‌ನ್ನು ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ರದ್ದುಮಾಡುವುದಕ್ಕೆ ಅಥವಾ ಸಂದರ್ಭಾನುಸಾರ ನೋಂದಣಿಯನ್ನು ಹಿಂಪಡೆಯುವುದಕ್ಕೆ ಅಥವಾ ನೋಂದಣಿಯನ್ನು ನವೀಕರಣ ಮಾಡದಿರುವುದಕ್ಕೆ ಅಥವಾ ನೋಂದಣಿಗೆ ಅನುಮೋದನೆ ನೀಡದಿರುವುದಕ್ಕೆ ಗುರಿಯಾಗತಕ್ಕದ್ದು.

27. **ನ್ಯಾಯಾಲಯಗಳಿಂದ ಅಪರಾಧದ ಸಂಜ್ಞಾನ.**– (1) ನೊಂದ ಮಹಿಳೆಯು ಅಥವಾ ಈ ಬಗ್ಗೆ ಆಂತರಿಕ ಸಮಿತಿಯು ಅಥವಾ ಸ್ಥಳೀಯ ಸಮಿತಿಯು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ದೂರನ್ನು ಸಲ್ಲಿಸಿದ್ದ ಹೊರತು ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್‌ರ ನ್ಯಾಯಾಲಯಕ್ಕಿಂತಲೂ ಅಥವಾ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಆಫ್ ಫಸ್ಟ್‌ಕ್ಲಾಸ್ ನ್ಯಾಯಾಲಯಕ್ಕಿಂತಲೂ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆ ನಡೆಸತಕ್ಕದ್ದಲ್ಲ.

(3) ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪರಾಧವು ಅಸಂಜ್ಞೇಯವಾದುದಾಗಿರತಕ್ಕದ್ದು.

28. **ಅಧಿನಿಯಮವು ಯಾವುದೇ ಇತರ ಕಾನೂನನ್ನು ಕುಂಠಿತಗೊಳಿಸದಿರುವುದು.**– ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಜೊತೆಗೆ ಇರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

29. **ನಿಯಮಗಳನ್ನು ರಚಿಸಲು ಸಮುಚಿತ ಸರ್ಕಾರದ ಅಧಿಕಾರ.**– (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸಿ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಲು ನಿಯಮಗಳನ್ನು ರಚಿಸಬಹುದು, ಎಂದರೆ,–

(ಎ) 4ನೇ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ ಸದಸ್ಯರಿಗೆ ಸಂದಾಯ ಮಾಡಬೇಕಾದ ಶುಲ್ಕಗಳು ಅಥವಾ ಭತ್ಯೆಗಳು;

(ಬಿ) 7ನೇ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದ ಮೇರೆಗೆ ಸದಸ್ಯರ ನಾಮನಿರ್ದೇಶನ;

(ಸಿ) 7ನೇ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡಬೇಕಾದ ಶುಲ್ಕಗಳು ಅಥವಾ ಭತ್ಯೆಗಳು;

(ಡಿ) 9ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಯಾರು ದೂರನ್ನು ಸಲ್ಲಿಸಬಹುದೋ ಆ ವ್ಯಕ್ತಿ;

(ಇ) 11ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ದೂರಿನ ವಿಚಾರಣೆಯ ರೀತಿ;

(ಎಫ್) 11ನೇ ಪ್ರಕರಣದ (3)ನೇ ಉಪ–ಪ್ರಕರಣದ ವಿಚಾರಣೆ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಗಳು;

(ಜಿ) 12ನೇ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದ ಮೇರೆಗೆ ಯಾವ ಪರಿಹಾರಕ್ಕೆ ಶಿಫಾರಸು ಮಾಡಬೇಕೋ ಆ ಪರಿಹಾರ;

(ಎಚ್) 13ನೇ ಪ್ರಕರಣದ (3)ನೇ ಉಪ–ಪ್ರಕರಣದ (i)ನೇ ಖಂಡದ ಮೇರೆಗೆ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ;

(ಐ) 14ನೇ ಪ್ರಕರಣದ (1)ನೇ ಉಪ–ಪ್ರಕರಣದ ಮತ್ತು (2)ನೇ ಉಪ ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ;

(ಜೆ) 17ನೇ ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ;

(ಕೆ) 18ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಅಪೀಲನ್ನು ಸಲ್ಲಿಸಬೇಕೋ ಆ ರೀತಿ;

(ಎಲ್) ನೌಕರರನ್ನು ಸೂಕ್ಷ್ಮ ಪರಿಜ್ಞಾನವುಳ್ಳವರನ್ನಾಗಿ ಮಾಡುವುದಕ್ಕಾಗಿ ಕಾರ್ಯಗಾರಗಳನ್ನು, ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮತ್ತು ಆಂತರಿಕ ಸಮಿತಿಯ ಸದಸ್ಯರಿಗೆ ಮನನ ಕಾರ್ಯಕ್ರಮಗಳನ್ನು 19ನೇ ಪ್ರಕರಣದ (ಸಿ) ಖಂಡದ ಮೇರೆಗೆ, ಯಾವ ರೀತಿಯಲ್ಲಿ ಏರ್ಪಾಡು ಮಾಡಬೇಕೋ ಆ ರೀತಿ; ಮತ್ತು

(ಎಂ) ಆಂತರಿಕ ಸಮಿತಿಯು ಮತ್ತು ಸ್ಥಳೀಯ ಸಮಿತಿಯು 21ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದಲ್ಲಿ ವಾರ್ಷಿಕ ವರದಿಯನ್ನು ಸಿದ್ಧಪಡಿಸಬೇಕೋ ಆ ನಮೂನೆ ಮತ್ತು ಆ ಕಾಲ.

(3) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡತಕ್ಕದ್ದಲ್ಲವೆಂದು ಎರಡೂ ಸದನಗಳು

ಒಪ್ಪಿದರೆ, ಆ ತರುವಾಯ ಆ ನಿಯಮವು ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ರಾಜ್ಯ ಸರ್ಕಾರವು, 8ನೇ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ, ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿದ್ದರೆ ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ವಿಧಾನಮಂಡಲವು ಒಂದು ಸದನವನ್ನು ಒಳಗೊಂಡಿದ್ದರೆ ಆ ಸದನದ ಮುಂದೆ ಇಡತಕ್ಕದ್ದು.

**30. ತೊಂದರೆಗಳನ್ನು ನಿವಾರಿಸಲು ಅಧಿಕಾರ.**– (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸಿ, ತೊಂದರೆಯನ್ನು ನಿವಾರಿಸುವುದಕ್ಕೆ ಅವಶ್ಯಕವೆಂದು ಕಂಡು ಬರಬಹುದಾದಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

* * * * *